ಅಪರಂಜಿ

ತಿಳಿನಗೆಯ ಕಾರಂಜಿ

ಬಿಡಿಪ್ರತಿ : ಕೇವಲ ಒಂದು ರೂಪಾಯಿ

ಸಂಪುಟ–೨
ಸಂಚಿಕೆ–೧
ಜನವರಿ ೮೫



" ಅಯ್ಯೋ ರಾಮು ! ದಿನಾಗಲೂ ' ಚಿತ್ರಹಾರ್ ' ಬೇಕು ಅಂದರೆ ಹೇಗಜ್ಜೀ ! ! "

ಅ ಪ ರ ಂ ಜಿ

ಗೌರವ ಸಲಹೆಗಾರರು :
ಶ್ರೀ ಅ.ರಾ.ಸೇ
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ : ರೂ. 15-00

ಮ ನ ವಿ

ಅಪರಂಜಿಗೆ ಸಾರ್ವಜನಿಕರಿಂದ ಆಶಾದಾಯಕ ಪ್ರೋತ್ಸಾಹ ಕಂಡು ಬರುತ್ತಿದೆ. ಇದೇ ಮುಂದುವರಿಯಲಿ ಎಂಬುದು ನಮ್ಮೆಲ್ಲರ ಹಾರೈಕೆ. ವ್ಯಾವಹಾರಿಕ ಅನುಕೂಲಗಳಿಗಾಗಿ ಅಪರಂಜಿಯ ಆಡಳಿತ ವ್ಯವಸ್ಥೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿದ್ದೇವೆ.

ಅಪರಂಜಿಗೆ ಹೊಸ ಹಾಸ್ಯ ಆಯಾಮಗಳನ್ನು ಹುಡುಕಬಲ್ಲ ಹೊಸ ಲೇಖಕರ ಅಗತ್ಯ ಬಹಳವಾಗಿದೆ. ವ್ಯಂಗ್ಯ ಚಿತ್ರ ಹಾಗೂ ಹಾಸ್ಯ ಚುಟಕಗಳಿಗೂ ಸುಸ್ವಾಗತ.

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ
ಬೆಂಗಳೂರು-560 003

ಶಿವಕುಮಾರ್
ಸಂಪಾದಕ

ಈ ಸಂಚಿಕೆಯಲ್ಲಿ........

ವ್ಯಂಗ್ಯ ಚಿತ್ರಗಳು—ಚಂದ್ರು, ರವಿರಾಜ ಹಾಲಂಬಿ ಮತ್ತು ಶ್ರೀನಿವಾಸಲು

ಮುದ್ರಣ : ಇಂಪ್ರೆಷನ್ಸ್, 404, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3

ಅಪರಂಜಿ

ಸಂಪುಟ–೨ ಜನವರಿ ೮೫ ಸಂಚಿಕೆ–೪

ಅಲ್ಲಿ ಸೂರ್ಯ ಚಂದ್ರ ನಕ್ಷತ್ರಗಳು ಬೆಳಗುವುದಿಲ್ಲ. ಅಲ್ಲಿ ಮಿಂಚುಗಳೂ ಬೆಳಗುವುದಿಲ್ಲ. ಇನ್ನು ಅಗ್ನಿಯು ಬೆಳಗುವ ಮಾತೆಲ್ಲಿ? ಆತ್ಮನು ಬೆಳಗುವುದನ್ನು ಅನುಸರಿಸಿ. ಅವನ ಬೆಳಕಿನಿಂದಲೇ ಇದೆಲ್ಲವೂ ಬೆಳಗುತ್ತಿದೆ.

—ಮುಂಡಕೋಪನಿಷತ್

ಇನ್ನೊಂದು ಕ್ರಿಸ್ತಶಕ ವರ್ಷವು ಆರಂಭವಾಗುತ್ತಿದೆ. ಕಳೆದ ವರ್ಷವು ನಮ್ಮ ರಾಷ್ಟ್ರದಲ್ಲಿ ಅನಿರೀಕ್ಷಿತ ತಿರುವುಗಳನ್ನು ದುರಂತಗಳನ್ನು ಕಂಡಿತು. ಈ ಪರಂಪರೆ ಇಲ್ಲಿಗೇ ನಿಲ್ಲಲಿ. ಇನ್ನಾದರೂ ಆರೋಗ್ಯಕರ ಬೆಳವಣಿಗೆಯಾಗಲಿ.

ನಿರೀಕ್ಷೆ ಸಕಾರಣವಾಗಿರಬೇಕು. ಯತ್ನವು ಸದುದ್ದೇಶದಿಂದಕೂಡಿದ್ದು, ಕ್ರಿಯೆ ಸಮಂಜಸವಾಗಿರಬೇಕು. ಹಾಗಾದರೆ ನಿರೀಕ್ಷಿತ ಫಲದೊರೆತೀತು. ಅದನ್ನು ನಾವು ಮನಗಾಣಬೇಕು. ಮಹಾಪ್ರಯತ್ನವನ್ನು ಅಲ್ಪಫಲಕ್ಕಾಗಿ, ಅಥವಾ ಅಲ್ಪ ಪ್ರಯತ್ನವನ್ನು ಮಹಾಫಲಕ್ಕಾಗಿ ಮಾಡುವುದು ನಗೆಪಾಟಲಾಗುತ್ತದೆ ಎಂಬ ಸರಳ ಪಾಠವನ್ನಾದರೂ ನೆನೆಯಬೇಕು.

ನಮ್ಮ ಜೀವನದ ಸುಕ್ಕುಗಳನ್ನು ಇನ್ನಾದರೂ ಇಸ್ತ್ರಿಮಾಡಿ ಕಳೆಯಬೇಕು.

ಹೊಸವರ್ಷವು ಎಲ್ಲರಿಗೂ ಹೊಸ ಹರ್ಷವನ್ನು ತರಲಿ. ಈಗ ಆರಂಭವಾಗಿರುವ ಬೀದಿಯ ಬಯಲಾಟ ರಾಷ್ಟ್ರಕ್ಕೆ ಆನಂದವನ್ನುಂಟುಮಾಡಲಿ.

4

ಗೆಲುವಿನ ಕಾರಣ

—ಕಿರಣ್

ಇಂದ್ರ ಸಭೆಯಲ್ಲಿ ಗುಲ್ಲೋ ಗಲ್ಲು. ಭೂಲೋಕದಲ್ಲಿ ಮಹತ್ವದ ಚುನಾವಣೆ ಯಂತೆ. ಸ್ವಿಂಗ್ ಯಾವ ಕಡೆಗೆ ಎಂದು ಭವಿಷ್ಯ ನುಡಿಯುವುದು ಬಹು ಕಷ್ಟವಂತೆ ಎಂಬುದೇ ಎಲ್ಲ ದೇವತೆಗಳ ಮಾತು. ಇಂದ್ರ ದೇವನಿಗೂ ಸಹಜ ಕುತೂಹಲ. ಆದರೆ ಬಿಸಿ ಬಿಸಿ ಚುನಾವಣಾ ಸುದ್ದಿ ಭೂಲೋಕದಿಂದ ತಿಳಿಯುವ ಬಗೆ ಹೇಗೆ? ಕೊನೆಗೆ ಬೃಹಸ್ಪತಿಯ ಸಲಹೆಯಂತೆ ಕುರುಕ್ಷೇತ್ರದ ವಿಶೇಷ ಬಾತ್ಮೀದಾರ ಸಂಜಯನನ್ನು ಕರೆಸಿದ.

ಸಂಜಯ ಬರುವ ಹೊತ್ತಿಗಾಗಲೇ ಫಲಿತಾಂಶಗಳು ನಿರ್ಣಯವಾಗುತ್ತಿದ್ದವು.

"ಎಲ್ಲೆಲ್ಲಿಂದಲೂ ಆಳುವ ಪಕ್ಷಕ್ಕೇ ಬಹುಮತ ಬರುತ್ತಿದೆ ಇಂದ್ರದೇವ!" ಸಂಜಯ ಉವಾಚ. ಎಲ್ಲ ದೇವತೆ, ಅಪ್ಸರೆಯರಿಗೂ ಸಂಭ್ರಮ. ರಂಭೆ ಊರ್ವಶಿಯರಂತೂ ಸುನೀಲ್, ಅಮಿತಾಭ್ ಅಂತ ಬೀಗುತ್ತಿದ್ದರು. ಅದೇಕೋ ಮೇನಕೆ ಮಾತ್ರ ಚಿಂತಾಕ್ರಾಂತಳಾಗಿ ಒಂದು ಮೂಲೆಯಲ್ಲಿ ಕುಳಿತಿದ್ದಳು.

ಈ ಸಂಧರ್ಭದಲ್ಲಿ ಸರ್ವಲೋಕ ಸಂಚಾರಿ ನಾರದರು ಸಭೆಗೆ ಬಂದರು. ಎಲ್ಲ ರಿಂದಲೂ ಅವರಿಗೆ ಪ್ರಶ್ನೆಗಳ ಸುರಿಮಳೆ.

"ಏಕೆ ಇಷ್ಟು ದೊಡ್ಡ ಬಹುಮತ ನಾರದರೇ?" "ಕರ್ನಾಟಕದಲ್ಲೂ ಕೇಂದ್ರದ ಪಕ್ಷಕ್ಕೇ ಬಹುಮತ ಏಕೆ?" "ಈ ಸ್ವಿಂಗಿಗೆ ಮುಖ್ಯ ಕಾರಣವೇನು ನಾರದರೇ?"

ನಾರದರು ಒಂದು ಕ್ಷಣ ಯೋಚಿಸಿ.

"ಭೂಲೋಕದಲ್ಲಿ ಜನರಿಗೆ ತಾವು ಸುರಕ್ಷಿತವಾಗಿದ್ದೇವೆ ಎಂಬ ಭಾವನೆ ಬಲವಾಗಿ ಬೇರೂರಿದೆ. ಅದಕ್ಕೇ ಈ ಲ್ಯಾಂಡ್ ಸ್ಲೈಡು" ಎಂದರು.

ಹತ್ತಿರದಲ್ಲೇ ಇದ್ದ ಅಪ್ಸರೆ ಸೌರಭೇಯಿ ಕೇಳಿದಳು.

"ಅಲ್ಲಾ ನಾರದರೇ, ಭೂಲೋಕದ ಜನರಿಗೆ ತಾವು ಸುರಕ್ಷಿತವಾಗಿದ್ದೇವೆ ಅನ್ನೋ ನಂಬಿಕೆ ಹೇಗೆಬಂತು?" ನಾರದರು ಇಂದ್ರ, ಸಂಜಯರ ಕಡೆ ಬೊಟ್ಟು ಮಾಡಿ ತೋರಿಸುತ್ತಾ "ಇವ್ರಿಬ್ಬರೂ ಇಲ್ಲಿರೋದ್ರಿಂದ. ಇನ್ನು ಹೊರಡಿ" ಎಂದು ಹೇಳಿ ಮೇನಕೆಯನ್ನು ಸಮಾಧಾನ ಪಡಿಸಲು ಹೊರಟರು.

5

ಅಪರಂಜಿ ಕಿಡಿ

— ಆನಂದ್

"ಉದ್ಯೋಗ ಕೊಡಿ, ಅಥವಾ ಅಧಿಕಾರ ಬಿಡಿ"

—ಗೋಡೆ ಬರಹ

ಅಧಿಕಾರ ಬಿಟ್ಟರೆ, ನಿರುದ್ಯೋಗಿಗಳು ಜಾಸ್ತಿಯಾಗುತ್ತಾರಲ್ಲ?

* * * * *

ಇಂದಿರಾ ಗಾಂಧಿ ಸ್ಟಾಂಪ್ ಬಿಡುಗಡೆ

—ಸುದ್ದಿ

ಆಕೆಯ ಮುಖಕ್ಕೆ ಮಸಿ ಬಳಿಯುವ ಯತ್ನ ಇನ್ನೂ ನಡೆದಿದೆ.

* * * * *

ಕಣ್ಣು ಮುಚ್ಚಿಕೊಂಡು ಕೊಳ್ಳಬಹುದಾದ ಕಲರ್ ಟಿ. ವಿ.

—ಜಾಹೀರಾತು

ಸರಿ, ಅರ್ಥವಾಯಿತು !

* * * * *

ವಿಜಯ್ ಅಮೃತ್ ರಾಜ್ ಅವರು **Forget** ಎಂಬುವರಿಂದ ಪರಾಜಿತರಾದರಂತೆ

—ಸುದ್ದಿ

ಅವರು ಗೆಲ್ಲುವುದನ್ನು ಮರೆತು ಎಷ್ಟೋ ದಿನಗಳಾದವು!

* * * * *

"ನಿಷ್ಠೆ ಎಂದರೇನು?"

ಅಂತುಳೆ ಅವರಿಗೆ ರಾಜೀವ್ ಪ್ರಶ್ನೆ

ಪಾಪ, ಅವರಿಗೇನು ಗೊತ್ತು?

* * * * *

ಕನ್ನಡದಲ್ಲಿ ಪ್ರಾರ್ಥನೆಗಾಗಿ ಅಗ್ರಹ ಪಡಿಸಿದ ಪಾದ್ರಿಗಳ ಬಂಧನ

—ಸುದ್ದಿ

ಪಾದ್ರಿಗಳ ಕೂಗು ಪೋಲೀಸರ ತನಕ ಮಾತ್ರ ಕೇಳಿಸಿತೇನೋ?

* * * * *

"ನಿಮ್ಮ ಭವಿಷ್ಯ, ಯೋಗ್ಯತೆಯಿಂದ ನಿರ್ಧಾರವಾಗ ಬೇಕೋ ಅಥವ ನಿಮ್ಮ ಜನನದಿಂದಲೋ?"

—ಚುನಾವಣಾ ಶೀರ್ಷಿಕೆ

ಗಾಜಿನಮನೆಯಲ್ಲಿರುವವರ ನೆನಪು ಬರುತ್ತಿಲ್ಲ!

* * * * *

'ಯಾಕೋ ಮಗು, ಪೆಚ್ಚು ಮುಖ' ಅಂದರೆ, "ಕಾರ್ಬೈಡ್ ಷೇರ್ ನವಂಬರಲ್ಲಿ ಕೊಂಡಿದ್ದೆ" ಅಂದನಂತೆ.

ಹಾಲು

ಮನೆಯಲೂ ನೆರೆಯಲೂ ಹಾಲಿಲ್ಲವೆಂದರೂ
ಗಂಡ ಒದರಿದ! ಬೇಕೇ ಬೇಕು ಕಾಫಿ
ಎಂತೆಂತೊ ಮಾಡಿದಳು ಕಾಫಿಯನು. ಮಗು ಅತ್ತು
''ಹಾಲಿಲ್ಲ" ಅಂದಿತ್ತು ಮೊಲೆಯ ಚೀಪಿ

ಎ. ಜಿ. ಭಟ್ಟ
(ಕಾವ್ಯ ವೇದನೆ)

ರಾ. ಶಿ. ಒಂದು ಪುಣ್ಯ ಸ್ಮರಣೆ

—ಅ. ರಾ. ಸೇ

ರಾ. ಶಿ. ಯವರು ದಿವಂಗತರಾಗಿ ಒಂದು ವರ್ಷ ಕಳೆಯಿತು. ಕಾಲ ಕಳೆದದ್ದೇ ತಿಳಿಯುವುದಿಲ್ಲ. ಒಂದರಿಂದ ಮತ್ತೊಂದು ಅವಘಡಕ್ಕೆ ಗಮನ ಹರಿಸುತ್ತಾ ಹೋದರೆ ಆಗುವುದು ಹೀಗೆ. ರಾಶಿಯವರಂತೆ ನಗು ನಗುತ್ತಾ, ನಗಿಸುತ್ತಾ ಕಾಲಕಳೆದರೂ, ಕಾಲ ಗಮನಕ್ಕೆ ಬರುವುದಿಲ್ಲ.

ಒಮ್ಮೆ ರಾಶಿಯವರು ಸರ್ವಧರ್ಮಸಮನ್ವಯದ ಬಗೆಗೆ ಮಾತನಾಡುತ್ತಿದ್ದರು. ಯೇಸು, ಮಹಮದ್ ಅವರ ಬಗೆಗೆ ಸ್ವಲ್ಪ ಹೊತ್ತುಮಾತನಾಡಿ ಆ ಮೇಲೆ ಯಾಜ್ಞವಲ್ಕ್ಯರ ಸುದ್ದಿಗೆ ಬಂದರು.

"ಇವರು ಮೂವರೂ ಹೇಳಿದ್ದು ಒಂದನ್ನೇ ಕುರಿತೋ, ಅಥವಾ ಇವರು ಮೂವರೂ ಹೇಳಿದುದನ್ನು ಆಚರಿಸಿದರೆ ಒಂದೇ ಪರಮಪದ ದೊರೆಯುವುದು ಎಂದೋ ಸಮನ್ವಯ ಹೇಗೆ ?" ಎಂದು ಕೇಳಿದೆ. ನಿಜಕ್ಕೂ ತಿಳಿದುಕೊಳ್ಳಬೇಕೆಂಬ ಆಸಕ್ತಿಯಿಂದ. 'ನಾನು ಯಾಜ್ಞವಲ್ಕ್ಯನನ್ನು ಓದಿದ್ದು ಒಂದೇ ಬಾರಿ ಮತ್ತೆ ಆತನನ್ನು ಓದುವುದಿಲ್ಲ ಆದರಿಂದ ನನ್ನ 'ನಾನು' ಎಂಬುದಕ್ಕೇ ಪೆಟ್ಟು ಬೀಳುತ್ತದೆ. ನನ್ನತನವೇ ಹೋಗುತ್ತದೆ. ನನಗದು ಇಷ್ಟವಿಲ್ಲ' ಎಂದರು.

1980ರಲ್ಲಿ ನಾನು ಮಹಲಿಂಗ ರಂಗನ ಅನುಭವಾಮೃತದ ಗದ್ಯ ರೂಪಾಂತರವನ್ನು ಪ್ರಕಟಿಸಿ ಒಂದು ಪ್ರತಿಯನ್ನು ಅವರಿಗೆ ಕಳುಹಿಸಿದೆ. ಅವರು ಬರೆದ ಪತ್ರ ನನ್ನ ಬಳಿಯಲ್ಲಿದೆ. ಗಂಭೀರ ಹಾಸ್ಯ, ಆತ್ಮ ಜ್ಞಾನಕ್ಕೆ ದಾರಿ ಮಾಡಿಕೊಡುತ್ತದೆ ಎಂಬ ತಮ್ಮ ವಾದಕ್ಕೆ ನಾನು ಬರೆದ ಪುಸ್ತಕವೇ ಉದಾಹರಣೆ ಎಂದವರು ಬರೆದಿದ್ದರು. ಅದರಲ್ಲಿ ಅನೇಕ ಅಂಶಗಳನ್ನು ಗುರುತು ಮಾಡಿಟ್ಟುಕೊಂಡು, ನಾನು ಬಂದಾಗ ಜಗಳ ಕಾಯುವುದಕ್ಕಾಗಿ ಕಾದಿರುವುದಾಗಿ ಅವರು ತಿಳಿಸಿದ್ದರು. ನನ್ನೊಡನೆ ಸೊಗಸಾಗಿ ಜಗಳವನ್ನೂ ಕಾದರು. ಮರುದಿನ ನನ್ನನ್ನು ಊಟಕ್ಕೂ ಕರೆದರು. ಅವರ ರುಚಿ. ನನಗೂ ಪ್ರಿಯವಾದ ರುಚಿ. ಆದರೆ ನನ್ನ ಗಂಟಲಲ್ಲಿ ಊಟ ಅಂದು ಇಳಿಯಲಿಲ್ಲ. ನನ್ನ ಊಟ ನೋಡು ಎಂದರು. ಎರಡು ಸ್ಲೈಸ್ ಬ್ರೆಡ್, ಒಂದು ಲೋಟ ತಿಳಿಸಾರು !

1983ರ ಆಗಸ್ಟಿನಲ್ಲಿ ಅವರು. "ನಾನು ಯಾರು? ಎಲ್ಲಿಂದ, ಏಕೆ ಬಂದೆ. ತಂದೆ ಯಾರು, ತಾಯಿಯಾರು ಎಂದೆಲ್ಲವನ್ನೂ ಈಗ ವಿಚಾರಿಸಿದ್ದಾಗಿದೆ. ಈಗ ಸ್ವಪ್ನ

ಸಮಾನವಾದ ವಿಶ್ವದಲ್ಲಿ ಇದ್ದೂ ಇಲ್ಲವಂತಾಗಿದ್ದೇನೆ" ಎಂದರು.

ಇವೆಲ್ಲವನ್ನೂ ಯೋಚಿಸಿದಾಗ ಅವರ ಅತಿದೊಡ್ಡ ಸಾಧನೆ ಎಂದರೆ (ವಿಜ್ಞಾನ, ತೌಲನಿಕ ತತ್ವ ಚಿಂತನೆಗಳನ್ನು ಕುರಿತು ಅವರು ಬರೆದಿದ್ದರೂ) ಆತ್ಮ ವಿಚಾರ ; ಆಧುನಿಕ ಸನ್ನಿವೇಶದ ಮೂಲಕ ಆತ್ಮ ಸಾಕ್ಷಾತ್ಕಾರದತ್ತ ಹೊರಟಿದ್ದುದು ಎಂದು ನನ್ನ ಅಭಿಪ್ರಾಯ.

'ಅಪರಂಜಿ' ಗೂ ಅವರಿಗೂ ಇದ್ದ ಬೆಸುಗೆಯನ್ನು ಕುರಿತು ಒಂದೆರಡು ಮಾತನ್ನು ಬರೆಯುವುದು ಇಲ್ಲಿ ತಪ್ಪಾಗಲಾರದು. ಸುಮಾರು ಹದಿನೈದು ವರುಷಗಳ ಕೆಳಗೆ 'ಕೊರವಂಜಿ' ಯನ್ನು ಪುನರುಜ್ಜೀವನ ಗೊಳಿಸಲು ಅವರೊಂದು ಯೋಜನೆ ಮಾಡಿದರು. ಆಡಳಿತ ಮತ್ತು ಸಂಪಾದಕೀಯ ಜವಾಬ್ದಾರಿಗಳನ್ನು ನೀನು ವಹಿಸಿಕೋ ಎಂದು ನನಗೆ ಹೇಳಿದರು. ನಾನು ವೈಯಕ್ತಿಕ ಕಾರಣಗಳ ನ್ನೊಡ್ಡಿ ನಿರಾಕರಿಸಿದೆ. 'useless fellow' ಎಂಬ ಪ್ರಶಸ್ತಿಗೆ ಪಾತ್ರನಾದೆ.

1980ರಲ್ಲಿ 'ಕೊರವಂಜಿ' ಯನ್ನು ಮತ್ತೆ ಆರಂಭಿಸಲು ನನ್ನದೊಂದು ಪ್ರಪೋಸಲ್ ಕಳಿಸಿದೆ. ಅವರು ಅದನ್ನು ನಿರಾಕರಿಸಿ 'ಅಪರಂಜಿ' ಯನ್ನು ಆರಂಭಿಸು. ಅದಕ್ಕೆ ಗೌರವ ಸಲಹೆಗಾರನಾಗಿರುತ್ತೇನೆ ಎಂದು ಬರೆದರು.

ಅಪರಂಜಿಯ ಮೊದಲ ಮೂರು ಸಂಚಿಕೆಗಳನ್ನು ಓದಿಸಿ ಅವರು ಮೆಚ್ಚುಗೆ ಸೂಚಿಸಿದರೆಂದು ಕೇಳಿದೆ. 1983ರ ಡಿಸಂಬರಿನಲ್ಲಿ ಅವರು ರುಗ್ಣಶಯ್ಯೆಯಲ್ಲಿದ್ದರು, ಪಿಸುಮಾತು ಆಡುವುದೂ ಕಷ್ಟವಾಗಿತ್ತು. ಅವರ ಪುತ್ರ ಶ್ರೀ ಶಿವಕುಮಾರ್ ನನ್ನನ್ನು ಅವರ ಶಯ್ಯೆಯ ಬಳಿ ಕರೆದುಕೊಂಡು ಹೋದರು ನನಗೆ ಆಗ ನೆನಪಾದ ಪದ್ಯ :

"ಶರಸಂದೋಹಮನನ್ಯ ಸೈನ್ಯ ದೊಡಲೊಳ್, ಬಿಲ್ಬಲ್ಮೆಯುಂ
ತನ್ನ ಶಿಷ್ಯರ ಮೈಯೊಳ್, ನಿಜಕೀರ್ತಿಯಂ ನಿಖಿಳ
ದಿಕ್ಚಕ್ರಂಗಳೊಳ್, ಚಿತ್ತಮಂ ಹರಪಾದಾಂಬುಜ ಯುಗ್ಮದೊಳ್
ನಿರಿಸಿ ದಂ.... .. ಆಚಾರ್ಯರೊಳ್ ದೊರೆಯಾರ್!"

ರಾಶಿಯವರು ಬಹುಕಷ್ಟದಿಂದ 'ಶೇಷಗಿರಿ ಬರಲಿಲ್ಲವೇ, ಅಪರಂಜಿ ....?' ಎಂದು ಕೇಳಿದರು. ಪರಮ ಯೋಗಿಗಳಿಗೂ ಹೀಗೆ ಮೋಹವುಂಟಾಗುವುದಿಲ್ಲವೇ! ಎಂದು ಪಂಪ ಉದ್ಗರಿಸಿದ್ದಾನೆ. ○

ಇನ್‌ವೆ (ಫೆ) ಸ್ಟಿಗೇಟಿವ್ ರಿಪ್ರೋರ್ಟಿಂಗ್

—ಕೇಫ

"ನಮ್ಮ ರಾಘಣ್ಣಿಗೆ ಕಿರಾಕ್ ಹಿಡಿದ್ಯೆತೇನೋ?" ಅಂತ ಬಾಬು ನನ್ನ ಕೇಳಿದಾಗ ನನಗೆ ಆಶ್ಚರ್ಯವಾಗದಿದ್ದರೂ—ನನ್ನ ಕುತೂಹಲ ಕೆರಳಿತು.

"ಅಂತಾ ಕಿರಾಕ್ ಕೆಲ್ಸ ಏನ್ಮಾಡ್ದ ರಾಘಣ್ಣ ನಿಂಗೆ?" ಕೇಳಿದೆ

"ನಿನ್ನೆ ಸಂಜೆ ನಾನಿಲ್ದಿದ್ದಾಗ ರಾಘಣ್ಣ ಜಗ್ಗ ಇಂಬ್ರೂ ನನ್ನ ಫ್ಯಾನ್ಸಿ ಇಸ್ಟೋರ್ಗೆ ಬಂದಿದ್ರಂತೆ. ನಂಬಷೀರಿದ್ದ. ಜಗ್ಗ ಕೇಳ್ದ-ಬಷೀರ್ ಒಂದು ಪ್ಯಾಕ್ ಫಾರಿನ್ ಸಿಗರೇಟ್ ಕೊಡೂಂತ. ಬಷೀರ್ ಕೇಳ್ದ—ಯಾವ್ದೂಕೇ ಬಿರಾಂಡ್ ಕೊಡ್ಲೀ?—ಅಂತ ಬಷೀರ್ ಹೇಳ್ದ—ಡಜನ್ ಗಟ್ಲೆ ಅವೆ—ಚೆಸ್ಟರ್ ಫೀಲ್ಡು. ಹಾಕಿ ಫೀಲ್ಡು, ವೈಟ್ ಫೀಲ್ಡು, ಬೆನ್ಸನ್ ಹೆಡ್ಜು, ಡಂಗ್ಹಿಲ್ಲು, ಯಿಸ್ಟೇಟ್ ಎಕ್ಸ್‌ಪ್ರೆಸ್ಸು ಯಿಸ್ಟೇಟ್ ಮೇಲು—ಎಲ್ಲಾ ಅವೆ ಯಾವ್ದುಬೇಕು?—ಅಂತ. ಆಗ ಜಗ್ಗ ಕೇಳಿದ ನಂತೆ—ಇದರಾಗೆಲ್ಲಾ ಅಸ್ಲೀಫಾರಿನ್‌ಯಾವ್ದು ಅದೇ ಕೊಡೂಂತ. ಬಷೀರ್ ಕಿಲಾಡಿ ಬೆಪ್ತಕ್ಡೀಗ್ಳು ಇಬ್ರೂ ಅಂತ ತಿಳ್ಕೊಂಬಿಟ್ಟ ಎಷ್ಟು ಬೇಕು?—ಅಂತಕೇಳ್ದ, ಎರಡು ಅಂದ ರಾಘಣ್ಣ. ಆಗ ಬಷೀರ್ ಅವರಿಬ್ಬರಿಗೂ ತಲಾ ಒಂದೊಂದು ಚಾರ್‌ಮಿನಾರ್ ಕೊಟ್ಟು—ಬಾಯ್ಲಿಟ್ಕೊಳ್ಳೀಂತೇಳಿ—ಸ್ಮಗಲ್ಡ್ ರಾನ್ಸನ್ ಲೈಟರಿಂದ ಅವುಗಳ್ನ ಹಚ್ಚಿ ಎಲ್ಡು ರೂಪಾಯಿ ಕಿತ್ಕೊಂಡು ಕಳ್ಸಿದನಂತೆ"—ಬಾಬು ವರದಿ ಮಾಡಿದ.

ಮೈಗಳ್ಳರ ಸಂಘದ ಹಾಲಿನಲ್ಲಿ ಬಾಬು, ಚಂದಿ, ನಾನು—ನಮ್ಮ ಮೂರನೇ ರೌಂಡಿನಲ್ಲಿದ್ವು. ಜಗ್ಗ ಬಂದ—ಒಬ್ನೇ.

"ಬಾಪ್ಪಾ ಉಸ್ತಾದ್ ಎಲ್ಲಿ ನಿನ್ನ ದೋಸ್ತಿ?" ಅಂತ ಬಾಬು ಕೇಳಿದ

"ಗಂಟ್ಲು ಕಟ್ಟಿದೆ ಕಣೋ ರಾಘಣ್ಣೀಗೆ. ಮಲಗಿದ್ದಾನೆ" ಅಂದ ಜಗ್ಗ.

"ಫಾರಿನ್ ಸಿಗರೇಟ್ ರಾಘಣ್ಣಿ ಗಂಟ್ಲಿಗೆ ತುಂಬಾ ಇಸ್ಟ್ರಾಂಗ್ ಅಂತ ನಿಂಗಾದ್ರೂ ಹೊಳೀಲಿಲ್ಲೇನೋ?" ಅಂದ ಬಾಬು

"ಲೋ ಜಗ್ಗ—ಅದೇನೊ ರಾಘಣ್ಣೀಗೆ ಇದ್ದಕ್ಕಿದ್ದ ಹಾಗೆ ಫಾರಿನ್ ಸಿಗರೇಟ್ ಬಯಕೇ ಬಂತು?" ಅಂತ ನಾನು ಕೇಳ್ದೆ

ಅದಕ್ಕೆ ಜಗ್ಗ–"ಅರುಣ್ ಶೌರಿ ಮಾಡಿದ್ದು. ತಾನೂ ಅವನ ಥರಾನೇ ಇನ್ವೆಸ್ಟಿಗೇಟಿವ್ ರಿಪೋರ್ಟರ್ ಆಗ್ಬೇಕೂ ಅಂತ ರಾಘಣ್ಣೀಗೆ ಅನ್ನಿಸಿಬಿಟ್ಟಿದೆ. ಇನ್ವೆಸ್ಟಿಗೆಟಿವ್ ರಿಪೊರ್ಟಿಂಗ್ ಮಾಡಿ ಭಾರಿ ದುಡ್ಡು ಸಂಪಾದಿಸಿ ಬಿಡೋಣಾಂತ ಅನ್ನಿಸ್ತಂತೆ. ನನ್ನ ಕೇಳ್ದ. ನಾನು ರೈಟಂದೆ. ನಮ್ಮ ಕಂಟ್ರೀಲಿ ಈ ಫಾರಿನ್ ಸೀಗರೇಟ್ ಹಾವಳಿಯಿಂದ ಎಷ್ಟು ದುಡ್ಡು ಫಾರಿನ್‌ಗೆ ಹೋಗ್ತಾ ಇದೇಂತ–ನನ್ನ ಕೇಳ್ದ. ನಾನು ತುಂಬಾ ಹೋಗ್ತಾ ಇದೇ–ಅಂದೆ. ಅದನ್ನೇ ಇನ್ವೆಸ್ಟಿಗೇಟ್ ಮಾಡಿ ರಿಪೋರ್ಟ್‌ಮಾಡೋಣಾಂತಂದ. ಅದನ್ನೂ ರೈಟಂದೆ. ಫಸ್ಟ್‌ಪ್ಪು–ಬಾಬು ಫ್ಯಾನ್ಸೀ ಸ್ಟೋರ್‌ನಲ್ಲಿ ಎಷ್ಟು ಫಾರಿನ್ ಸಿಗರೇಟಿವೆ–ನೋಡೋಣ–ಅಂದ. ರೈಟಂದೆ. ಅದೇ ನೋಡು, ಬಾಬು ಇಲ್ದಾಗ ಅಲ್ಲಿಗೆ ರಾಘಣ್ಣ ನಾನು ಹೋಗಿದ್ವು"-ಅಂತ ಎಲ್. ಕೆ. ಜಿ. ಮಗು ಟ್ವಿಂಕಲ್ ಟ್ವಿಂಕಲ್ ಒಪ್ಸೊಹಾಗೆ ಹೇಳಿದ.

"ಆಮೇಲೆ?"

"ಬಾಬು ಸ್ಟೋರ್‌ನಲ್ಲಿ ಮಾಲ್‌ಸಮೇತ ಬಷಿರ್ ಸಿಕ್ದ. ಒಂದು ಬ್ರಾಂಡ್ ಟೆಸ್ಟ್ ಮಾಡಿದ್ವು. ಅದನ್ನ ಸೇದಿದ ಮೇಲೆ ರಾಘಣ್ಣಿ ಗಂಟ್ಲು ಆಫ್ ಆಗೋಯ್ತು ಫಾರಿನ್ ಸಿಗ್ರೇಟ್‌ಗಿಂತ ಚಾರ್ ಮಿನಾರೇ ಬೆಸ್ಟು–ಅಂದ. ಅದಕ್ಕೇ ಈಗ ರಾಘಣ್ಣಿ ಫಾರಿನ್ ಸಿಗರೇಟ್‌ನಿಂದ ದೇಶಕ್ಕೆಲ್ಲ ಅಪತ್ತಾಗ್ತಾ ಇರೋದು–ದೇಹಕ್ಕೆ–ಅಂತ ತೀಸಿಸ್ ಬರೀತಾ ಇದ್ದಾನೆ" ಅಂದ ಜಗ್ಗ.

"ಸರಿ ಈಗ ನೀನ್ಯಾಕ್ಬಂದೆ?" ಬಾಬು ಕೇಳ್ದ.

"ನೀನಿಲ್ಲಿದ್ರೆ ನಿಂಗೆ ತಿಳ್ಸಿ–ಒಂದು ಕ್ವಾರ್ಟರ್ ತಕೊಂಬಾ ಅಂತ ಹೇಳ್ದ"

"ಷಹಭಾಸ್ ಜಗ್ಗ, ನಮ್ಮ ರಾಘಣ್ಣೀನ ತಲಾಷ್ ಮಾಡ್ಲೇಬೇಕು. ಒಂದು ಕ್ವಾರ್ಟರ್ ಕೊಡಿಸ್ತೇನೆ–ರಾಘಣ್ಣ ಗಂಟ್ಲಿಗೆ ಹುಯ್ಸಿ. ಇದೇ ರೀತಿ ಇನ್‌ಫೆಸ್ಟಿಗೇಟ್ ಮಾಡಿ ರಿಪೋರ್ಟ್ ಮಾಡ್ತಾನೇ ಇರು–ಅಂತ ಹೇಳು"-ಅನ್ನುತ್ತಾ ಬಾಬು ಬೇರೆರ್ ಮುತ್ತಣ್ಣನಿಗೆ ಹೇಳಿ ಒಂದು ಕ್ವಾರ್ಟರ್ ತರ್ಸಿ ಜಗ್ಗನ ಕೈಲಿ ಕೊಟ್ಟ

"ಇನ್‌ಫೆಸ್ಟಿಗೇಟಿವ್ ಅಲ್ಲ ಇನ್ವೆಸ್ಟಿಗೇಟಿವ್" ಅಂದ ಜಗ್ಗ

"ನಿಂಗೆ ರಾಘಣ್ಣಿಗೆ ಎಲ್ಲೂ ಒಂದೆ–ಮಾತಾಡ್ದೆ ಕ್ವಾರ್ಟರು ತಕೊಂಡ್ಹೋಗು" ಅಂದ ಬಾಬು

ಜಗ್ಗ ಮಾತಾಡ್ದೆ ಬಾಬು ಕೊಟ್ಟ ಕ್ವಾರ್ಟರ್‌ನ ತಕೊಂಡು ಹೋದ ○

ಅಡ್ಡಬಾಯಿ ಮೀನಾಕ್ಷಿ

—ವೈ. ಶಿ.

ಪ್ರಕಾಶ್ ತಾನು ಮೀನಾಕ್ಷಿನ ಮದುವೆಮಾಡಿಕೋತೀನಿ ಅಂತ ಹೇಳಿದಾಗ, ಇಬ್ಬರೂ ಪರಿಚಯವಿದ್ದ ಹಿರಿಯರೊಬ್ಬರು "ಸರಿ ಇನ್ನು ಪ್ರಕಾಶ ಹುಚ್ಚಾಸ್ಪತ್ರೆ ಸೇರಿದ್ಹಾಗೇ" ಅಂತ ಭವಿಷ್ಯ ನುಡಿದಿದ್ದರು.

ಮೀನಾಕ್ಷಿಗೆ ಚಿಕ್ಕಂದಿನಿಂದಲೇ ಬೇರೊಬ್ಬರ ಮಾತುಗಳನ್ನು ಅವರಿಗಿಂತ ಮುಂಚೆಯೇ ಪೂರ್ಣಗೊಳಿಸುವ ಚಾಳಿ. ಕೆಲವೊಮ್ಮೆ ಇವಳು ಮುಗಿಸಿದ ರೀತಿ ತಪ್ಪಾಗಿದ್ದು ಹೇಳಿದವರ ಅಸಮಾಧಾನಕ್ಕೆ ಕಾರಣವಾದರೆ, ಇನ್ನು ಕೆಲವು ಬಾರಿ ಸರಿಯಾಗಿ ಪೂರ್ಣಗೊಳಿಸಿ ಇನ್ನೂ ರೇಗಿಸುತ್ತಿದ್ದಳು.

"ಹಿಂದೆ ಜವಹರಲಾಲ್ ನೆಹರೂರವರು............" ಎಂದು ಮೀನಾಕ್ಷಿ ಮನೆಗೆ ಬಂದ ಅತಿಥಿಯಾರಾದರೂ ಶುರುಮಾಡಿದರೆ,

"ಭಾರತದ ಪ್ರಧಾನಿಯಾಗಿದ್ದಾಗ" ಮೀನಾಕ್ಷಿಯ ಅಡ್ಡಬಾಯಿ. ಅತಿಥಿಗಳು "ಚಿಕ್ಕವರಾಗಿದ್ದಾಗ" ಎಂದೋ "ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ" ಎಂದೋ ಹೇಳಲು ಉದ್ದೇಶಿಸಿರಬಹುದು. ಏನೇ ಇದ್ದರೂ ಅವರು ಮರುಮಾತಿಲ್ಲದೇ ಹಿಂತಿರುಗುತ್ತಿದ್ದರು.

ಎಲ್ಲಾ ತಂದೆ ತಾಯಿಯರಂತೆ, ಮೀನಾಕ್ಷಿಯ ಅಪ್ಪ ಅಮ್ಮಂದಿರೂ, ತಮ್ಮ ಮುದ್ದಿನ ಮಗಳ ಈ ಚಾಳಿಯ ಅನರ್ಥಗಳನ್ನು ಖಂಡಿತವಾಗಿ ಊಹಿಸಿರಲಿಕ್ಕಿಲ್ಲ. ಈ ರೀತಿಯ ವಾಕ್ಯಪೂರೈಕೆ, ಬುದ್ಧಿವಂತಿಕೆಯ ಲಕ್ಷಣ ಎಂದೂ ಅವರು ತಿಳಿದಿದ್ದಿರಬಹುದು. ಮೀನಾಕ್ಷಿಯ ತಾಯಿ ಮೊದಲ ಬಾರಿಗೆ "ಮೀನೂ, ಎಲ್ಲಿ ಸ್ವಲ್ಪ ಹಾಲು .... " ಎಂದು ಹೇಳುವಷ್ಟರಲ್ಲಿ ಮಗು "ಕುಡಿದ್ಬಿಡಮ್ಮಾ. ಚಿನ್ನಾ" ಎಂದು ವಾಕ್ಯವನ್ನು ಮುಗಿಸಿದಾಗ. ತಾಯಿ ಜಂಭದಿಂದ, ಕೂಡಲೇ ತಮ್ಮ ಯಜಮಾನರ ಆಫೀಸ್‌ಗೆ ಫೋನ್ ಮಾಡಿ, ಈ ಮಹತ್ವದ ಸುದ್ದಿಯನ್ನು ತಿಳಿಸಿದ್ದರೆ ಆಶ್ಚರ್ಯವೇನಿಲ್ಲ. ತಂದೆಯವರೂ, ಆ ದಿನವೆಲ್ಲಾ ತಮ್ಮ ಸ್ನೇಹಿತರೊಂದಿಗೆ, ಮಗಳ ಪ್ರತಾಪವನ್ನು ಕೊಚ್ಚಿಕೊಂಡಿದ್ದರೆ ಅದು ಸಹಜವಾಗಿ ಪಿತೃ ವಾತ್ಸಲ್ಯ ಅಲ್ಲವೇ !

ಮೀನಾಕ್ಷಿ ಮದುವೆ ವಯಸ್ಸಿಗೆ ಬಂದಾಗ, ನೋಡುಕ್ಕೆ ಲಕ್ಷಣವಾಗಿ

ದ್ದರೂ. ಈ ಅಡ್ಡಬಾಯಿದೆಸೆಯಿಂದ, ಬಂದ ಗಂಡುಗಳೆಲ್ಲಾ ಹೆದರಿ ಓಡಿಹೋಗುತ್ತಿದ್ದರು. ಈ ವಿಷಯದಲ್ಲಿ ಪ್ರಕಾಶ ಸ್ವಲ್ಪ ಸಾಹಸಿಯೇ ಸರಿ. ಅವಳ ರೂಪಕ್ಕೆ ಮರುಳಾಗಿ ಒಪ್ಪಿಕೊಂಡ.

ಮದುವೆಯಾಗಿ ಆರು ತಿಂಗಳನಂತರ ನನಗೆ ಪ್ರಕಾಶ ಸಿಕ್ಕಿದ್ದ. ಮೀನಾಕ್ಷಿ ಅಡ್ಡ ಬಾಯಿ ಪ್ರಯುಕ್ತ ತನಗಾದ ಮಾನಸಿಕ ತಾಪ, ಸ್ನೇಹಿತರ ಮುಂದೆ ಆದ ಅವಮಾನ ಎಲ್ಲವನ್ನೂ ತೋಡಿಕೊಂಡ. ನಾನೇನು ಮಾಡಲಿ ಅಂತ ನನ್ನ ಸಲಹೆ ಕೇಳಿದ.

ನಾನು ಸ್ವಲ್ಪ ಯೋಚಿಸಿ, "ನೋಡು ಪ್ರಕಾಶ್, ನೀನು ಮಾತನಾಡ್ತಾ ಇರೋ ವಿಷಯ ಸ್ವಲ್ಪವಾದರೂ ಮೀನಾಕ್ಷಿಗೆ ತಿಳಿದಿದ್ರೆ ತಾನೆ ಅವಳಿಗೆ ಅಡ್ಡ ಬಾಯಿ ಹಾಕೊ ಅವಕಾಶ. ಇನ್ನು ಮೇಲೆ ಅವಳ ಮುಂದೆ ಮಾತಾಡ್ತಾ ಇರೋವಾಗ ಅವಳಿಗೆ ತಿಳೀದೇ ಇರೋ ವಿಷಯ ಮಾತ್ರ ಮಾತಾಡುವುದಕ್ಕೆ ಪ್ರಯತ್ನ ಪಡು. ಪರಿಸ್ಥಿತಿ ಸುಧಾರಿಸಬಹುದು" ಎಂದೆ.

ಇದಾದ ಸ್ವಲ್ಪ ದಿನಗಳ ನಂತರ, ನಾನು ಅವರ ಮನೆಗೆ ಹೋಗಿದ್ದಾಗ, ಪ್ರಕಾಶ ನನ್ನ ಸಲಹೇನ ಕಾರ್ಯಗತಮಾಡಿದ್ದ.

"ನೋಡು ಶಿವು ನಿನ್ನೆ ರಾತ್ರೆ ನನಗೆ ಒಂದು ವಿಚಿತ್ರವಾದ ಕನಸು ಬಿತ್ತು. ನಾನು ರಾಕೆಟ್‌ನಲ್ಲಿ ಚಂದ್ರಲೋಕಕ್ಕೆ ಹಾರುತ್ತಿದ್ದ ದಾರೀಲಿ ಒಬ್ಬ ಪೋಲಿಸ್ ಪೇದೆ. ಹತ್ತಿರದಿಂದ ನೋಡಿದರೆ ಯಾರೂ ಅಂತೀ? ವಾಜಪೇಯಿ ! ಕೈಲೊಂದು ಕಮಲದ ಹೂವು. ರಾಕೆಟ್ ನಿಲ್ಲಿಸು ಅಂತ ಗದರಿಸಿದರು. ನಾನು ಹತ್ತಿರದಲ್ಲೇ ಇದ್ದ ಮೋಡ ಒಂದರ ಮೇಲೆ ರಾಕೆಟ್ ನಿಲ್ಲಿಸಿದೆ..........

ಪ್ರಕಾಶನ ಕನಸಿನ ಕಥನ ನಿರರ್ಗಳವಾಗಿ ಸಾಗುತ್ತಿತ್ತು. ಮೀನಾಕ್ಷಿಯ ಅಡ್ಡ ಬಾಯಿಗೆ ಅವಕಾಶವೇ ಇರಲಿಲ್ಲ. ಸಮಾಧಾನದ ಉಸಿರೆಳೆದು ಹೊರಬಂದೆ.

ಮುಂದಿನ ವಾರ ಪ್ರಕಾಶ ಮತ್ತೆ ರೇಗುತ್ತಾ ನನ್ನ ಬಳಿ ಬಂದ.

"ನೀನೋ ನಿನ್ನ ಹಾಳು ಸಲಹೇನೋ", ಅಂತ ಉರಿದು ಬಿದ್ದ.


"ಏನು ಸಮಾಚಾರ ?"

"ಕೆಲವು ದಿನಗಳ ಮಟ್ಟಿಗೆ ನಿನ್ನ ಸಲಹೆ ಸರಿಯಾಗಿಯೇ ಕೆಲಸಮಾಡ್ತು. ಮೀನಾಕ್ಷಿ ಮುಂದೆ ಮಾತಾಡುವಾಗ, ನನ್ನ ಕನಸು, ಆಫೀಸಿನಲ್ಲಾದದ್ದೂ ಅಂತಹದೇ

ವಿಷಯ ಮಾತಾಡಿದ್ದೆ. ನಿನ್ನೆ ಶಂಕರೂ ಅವನ ಹೆಂಡ್ತಿ ಬಂದಿದ್ದಾಗ ನನ್ನ ಕನಸಿನ ವಿಷಯ ಹೇಳುಕ್ಕೆ ಶುರು ಮಾಡ್ದೆ. ವಾಜಪೇಯಿ ರಾಕೆಟ್ ನಿಲ್ಲಿಸು ಅಂತ ಗಪರಿಸಿದ ಮೇಲೆ, ನಾನು ದಾರಿಪಕ್ಕದಲ್ಲಿ ರಾಕೆಟ್ ನಿಲ್ಲಿಸಿದೆ ಅನ್ನೊ ಅಷ್ಟು ಹೊತ್ತಿಗೆ ಮೀನಾಕ್ಷಿ ತನ್ನ ಅಡ್ಡ ಬಾಯಿಹಾಕಿದಳು. "ಅಯ್ಯೋ ದಾರಿ ಪಕ್ಕ ಅಲ್ಲಾರೀ ನೀವು ರಾಕೆಟ್ ನಿಲ್ಲಿಸಿದ್ದು, ಹತ್ತಿರದಲ್ಲೇ ಇದ್ದ ಮೋಡದ ಮೇಲೆ !"

ಈಗ ನಾನೇನು ಮಾಡಲೀ ಹೇಳು"

ನನಗೇನೋ ಏನೂ ತೋಚುತ್ತಿಲ್ಲ. ನೀವಾದರೂ ಪ್ರಕಾಶನ ಪ್ರಾಬ್ಲಂಗೆ ಪರಿಣಾಮಕಾರಿ ಪರಿಹಾರ ಪ್ರಪೋಸಿಸುವಿರಾ ?



"ಹೂ ಕೀಳಬಾರ್ದು ಮಗು ಅಂತ ಹೇಳ್ತಾನೇ ಇರ್ತೀನಿ!"

ಬಾರಿನಲ್ಲಿ ಒಂದು ಸಂಜೆ

—ಇ. ಡಿ. ನರಹರಿ

ಟಾರು ರೋಡಿನ ಪಕ್ಕದಲ್ಲಿ
ಬಾರನೊಂದನು ಕಂಡ ಗುಂಡನು
ಡೋರು ನೂಕಿ ಒಳಗೆ ಹೊಕ್ಕು
ಚೇರನೊಂದನು ಪಡೆದನು

ಪಕ್ಕದಲ್ಲಿಹ ವ್ಯಕ್ತಿಕಡೆಗೆ
ತಿರುಗಿ ಹೇಳಿದ ಗುಂಡನು
"ಜೆಟ್ಟುಯುಗವು ಬಂದು ಇಂದು
ಕೆಟ್ಟು ಹೋಯಿತು ಎಲ್ಲವೂ

"ನಮ್ಮ ಮಕ್ಕಳ ವೇಷ ಭೂಷಣ
ದೋಷ ಪೂರಿತವಾಯಿತು
ಡ್ಯಾನ್ಸು ತಿರ್ಪುದು ಅಲ್ಲಿನೋಡಿ
ಜೀನುಧಾರಿ ಫಿಗರನು

"ಹುಡುಗನುಡುಗೆ, ಹುಡುಗಿ ನಡಗೆ
ಗಂಡುಬಣ್ಣ ನಡುವೊ ಸಣ್ಣ
ಗಂಡೊ ಹೆಣ್ಣೊ ನೀವೆ ಹೇಳಿ
ನನಗೆ ಬಂದಿದೆ ಸಂಶಯ"

ಪಕ್ಕದಲ್ಲಿಹ ಕಪ್ಪು ವ್ಯಕ್ತಿ
ನಕ್ಕು ಹೇಳಿತು ಸುಮ್ಮನೆ
"ನನಗೆ ಗೊತ್ತದು ಹೆಣ್ಣು ಹುಡುಗಿ
ನನ್ನ ಪ್ರೇಮದ ಪುತ್ರಿಯು"

"ಸಾರಿ ಸ್ವಾಮಿ ಸಾರಿ ಸಾರಿ
ಏನೊ ಎಂದೆನು ಬೀರು ಹೀರಿ
ನೀವು ಹುಡುಗಿಯ ತಂದೆಯೆಂಬುದ
ಅರಿಯದಲೆ ನಾನುಡಿದೆನು"

"ತಂದೆಯಂತೆ, ತಂದೆ! ತಂದೆ!!
ಯಾರು ತಂದೆ? ಯಾರ ತಂದೆ!
ನಿಲ್ಲಬೇಡಲೊ ನನ್ನ ಮುಂದೆ
ಸಹಿಸೆನಿಂತಹ ನಿಂದೆಯು"
ಎಂದು ಚೀರಿದ ಕಪ್ಪು ವ್ಯಕ್ತಿಯು
ಮುಂದುವರಿಸಿತು ಮಾತನು
"ನಾನು ಹುಡುಗಿಗೆ ಸ್ವಂತಮಾತೆ
ಪ್ರೇಮ ಮಮತೆಯುದಾತೆಯು"
(ಸಾಧಾರ)



"ತಂದೇ ತದ್ರೂಪು"

ಒಡತಿಗೆ

—ನಾಗಭೂಷಣ



ಕಮಲವಂತಹ ಕಣ್ಣು, ಸಂಪಿಗೆಯ ಮೂಗು, ಚುಂಬಿಸಲು ಕೆಂಪು ತುಟಿ, ಮುಟ್ಟೆ ಮೆದುಕೆನ್ನೆ, ಕುಂಕುಮಕೆ ಹಣೆ, ನೀಳ ಕೇಶರಾಶಿ, ಬಳೆಗೆ ಕಾಲುಂಗುರಕೆ ಕೈಯಿ ಕಾಲುಗಳು ಬಾಳೆದಿಂಡಿನ ತೆರದ ತೊಡೆ, ಸಣ್ಣ ನಡುವೂ ಇರುವ ಸುಂದರ ತರುಣಿಯರ ಬಯಸಲಿಲ್ಲ.

ನಿನಗಿದೇನೂ ಇಲ್ಲ
ನಾ ನಿನಗೆ ಸೋತೆನಲ್ಲ
ಚೋಟುದ್ದ ಶ್ವೇತಾಂಬರಿಯೆ
ನಿನ್ನ ಬಯಸಿ
ಬೆರೆಗಾದೆನಲ್ಲ.
ನೀನು ದಹಿಸುತ ಸುಟ್ಟೆ

ನನ್ನೆದೆಯನೆಲ್ಲ
ನಾ ನಿನ್ನ ಬಿಡಲಾರೆನಲ್ಲ
ನನ್ನೊಡತಿ
ತನು ಮನವ ಗೆದ್ದೆಯಲ್ಲ
ಈ ಗುಲಾಮನಿಗೆ
ಈ ಜನ್ಮದಲಿ ಇನ್ನು ಮುಕ್ತಿಯಿಲ್ಲ

ಪಕ್ಷಿರಾಜ್ಯ ಎತ್ತ?

—ಲೀಲಾ ಕುಮಾರ

ಮೈದಾನದ ಪಕ್ಷಿಧಾಮದಲ್ಲಿ ಭಾರೀಗೊಂದಲವಾಗುತ್ತಿತ್ತು. ಹಕ್ಕಿಗಳೆಲ್ಲಾ ಹುಚ್ಚು ಹಿಡಿದಂತೆ ಕಿರಿಚುತ್ತಿದ್ದವು. ಇದನ್ನು ನೋಡಿದ ಕವಿ 'ಆಹಾ ಕಲಕಲರವ, ಏನೀ ಆನಂದಾನುಭವ, ಎಂದು ಪದ್ಯ ಬರೆದ.

ಆದರೆ ಪಕ್ಷಿಗಳಿಗೆ ಆನಂದಾನುಭವ ಆಗುತ್ತಿರಲಿಲ್ಲ. ಪರಿಸರ ಮಾಲಿನ್ಯದಿಂದ ಜಲ, ವಾಯುಗಳ ಸೇವನೆ ಕಷ್ಟವಾಗುತ್ತಿತ್ತು. ಕಾಳು ಕಡಿಗಳೆಲ್ಲ ಇಲಿ ಹೆಗ್ಗಣ ಗಡಂಗುಗಳ ಪಾಲಾಗಿ, ಒಳ್ಳೆಯ ಅನ್ನ ಸಿಕ್ಕುತ್ತಿರಲಿಲ್ಲ.

ಆಗ ಹಂಸ ಹೇಳಿತು "ಇಲ್ಲಿಂದ ಹಂತ ಹಂತವಾಗಿ ಹಿಮದ ಬೆಟ್ಟಗಳನ್ನೇರಿದರೆ ಮಾನಸ ಸರೋವರ ಸಿಗುತ್ತದೆ. ಕಾಗೆಯಾಗಿದ್ದೆ. ಹಾಗೇ ಏರಿ ಅಲ್ಲಿ ನೀರಿನಲ್ಲಿ ಮುಳುಗಿ ಎದ್ದೆ. ಹಂಸವಾಗಿದ್ದೆ. ತಿಂದಷ್ಟು ತಾವರೆ ಮೊಗ್ಗು. ಬನ್ನಿ ಎಲ್ಲರೂ ಹೋಗೋಣ"

ಸೈಬೀರಿಯದ ಕೊಕ್ಕರೆ ಹೇಳಿತು

"ಅಲ್ಲಿಗೆ ಹೋಗದೆ ನಾನು ಬೆಳ್ಳಗಿಲ್ಲವೇ? ಇದೇ ನನ್ನ ತವರು. ವರ್ಷದಲ್ಲಿ ಹತ್ತು ತಿಂಗಳು ಬೇರೆ ದೇಶದಲ್ಲಿರುತ್ತೇನೆ ಅಷ್ಟೇ.

ಈ ಹಂಸದ ಕತೆ ಕಾಗೆ ಕತೆ ಅಷ್ಟೇ. ಹಂಸಕ್ಕಿಂತ ಕಾಗೆಯೇ ಚೆನ್ನ. ಏನದರ ಬಣ್ಣ ಏನಿಂಪು ಅದರ ಸ್ವರ, ಏನದರ ತೀಕ್ಷ್ಣ ನೋಟ ಅದು ಕೊಳೆತ ಮಾಂಸ, ಕಡ್ಡಿ ಕಾಳುಗಳನ್ನು ಕಂಡೊಡನೆ ಮಧುರ ಸ್ವರದಿಂದ ಕರೆದು, ಕಿತ್ತು ಕಿತ್ತು ಹಂಚಿಕೊಳ್ಳುತ್ತವೆ. ಇದೆ ಸಮತೆ, ಪಕ್ಷಿಗಳು ಸಾಧಿಸಬಹುದಾದ ಅತ್ಯುನ್ನತಿ ಇದೇ! ಹಂಸವಂತೆ ಹಂಸ! ಉದ್ದ ಕಾಲಿನ ಸೊಟ್ಟ ಕೊಕ್ಕರೆ! ತಾವರೆಯಂತೆ, ಮಾನಸ ಸರೋವರವಂತೇ! ಕಗ್ಗ, ಸುಳ್ಳಿನ ಕಂತೆ!"

ಅಲಾಸ್ಕದ ರಣ ಹದ್ದು ಹೇಳಿತು

"ಹೌದು ನಾನೂ ಎತ್ತರ ಎತ್ತರ ಹಾರಿದ್ದೇನೆ. ಮಾನಸ ಸರೋವರವೇ ಇಲ್ಲ.

ಆದರೆ ಕೊಳೆತ ಮಾಂಸದ ತುಂಡು ಬಲು ರುಚಿ. ಮಧ್ಯಪ್ರಾಚ್ಯ, ಲೆಬನಾನ್, ಬೆಲ್ ಫಾಸ್ಟ್, ಬೇಕಾದಷ್ಟು!

ತಾವರೆ ಮೊಗ್ಗಂತೆ! ನೀರಸ! ಮೂರ್ಖತನದ ಪರಮಾವಧಿ! ಮಧ್ಯ, ದಕ್ಷಿಣ ಅಮೆರಿಕಾಗಳಲ್ಲಿ ಸೊಂಪು ನಮ್ಮ ಆಹಾರ, ಆದರೆ ಅವರವರ ಆಹಾರ ಅವರೇ ಹುಡುಕಿಕೊಳ್ಳಬೇಕು!"

ನೈಟಿಂಗೇಲ್, ಕೋಗಿಲೆಗಳು ಹೇಳಿದ್ದು ಕೇಳಲೇ ಇಲ್ಲ.

ಹಂಸಹೇಳಿತು "ಅಣುವಿಕಿರಣ, ಇಂಡಸ್ಟ್ರಿಯಲ್ ಸ್ಲ್ಯಾಗ್‌ಗಳಿಂದ ಅಲ್ಲಿ ಪ್ರಾಣಿಗಳೇ ಉಳಿಯುವಂತಿಲ್ಲ; ಮಾನಸ ಸರೋವರ ಎಷ್ಟು ಪಕ್ಷಿಗಳು ಬಂದರೂ ತುಂಬುವುದಿಲ್ಲ. ಕೊಳೆತದ್ದನ್ನು ಏಕೆ ತಿನ್ನಬೇಕು? ಬನ್ನಿ, ಶುಭ್ರಮನ, ಶುಭ್ರಾಹಾರ ನಮ್ಮ ಹಕ್ಕು!"

ಆದರೆ ಬಹುಸಂಖ್ಯಾತ ಕಾಗೆಗಳು "ಈ ಹಂಸದ್ದು ಅವೈಜ್ಞಾನಿಕ ಪ್ರತಿಗಾಮೀ ನಿಲವು ಶುದ್ಧತೆಗೆ ಧಿಕ್ಕಾರ" ಎಂದವು. ಇಷ್ಟು ಹೊತ್ತು ಸುಮ್ಮನಿದ್ದ ಗಿಳಿಗಳು 'ಧಿಕ್ಕಾರ' ಎಂದು ಪ್ರತಿಧ್ವನಿಸಿದವು.

"ಮಾನಸ ಸರೋವರವೇ ಇಲ್ಲ; ಇದ್ದರೂ ಅದೊಂದು ಪರ್ವತದ ದೊಡ್ಡ ಗುಂಡಿ; ಕಾಗೆಗಳು ಹಂಸಗಳಾಗುತ್ತವೆಂಬುದು ಮೂಢನಂಬಿಕೆ; ಕವಿಗಳು ಹೊಸೆದ ಕಗ್ಗ. ಅದಕ್ಕೇ ನಾವು ಇನ್ನೂ ಕಿಗ್ಗಣ್ಣ ನಾಮ ಸಂವತ್ಸರದಲ್ಲೇ ಇರುವುದು. ಪ್ರಗತಿಗೆ ಜಯುಜಯು" ಎಂದವು ಕಾಗೆಗಳು.

ಅದನ್ನೇ ಈ ಕವಿ 'ಕಲಕಲರವ' ಅಂದದ್ದು.

ಪುರಾಣ ಪುರುಷರ ವಕೀಲಿ

—ಡಾ|| ಪರಡ್ಡಿ ಮಲ್ಲಿಕಾರ್ಜುನ

ಪ್ರಿಅಂಬಲ್ :—

ಕೊಲೆಯ ಅಪರಾಧಕ್ಕಾಗಿ ಕೋರ್ಟು (ಸಮರ್ಥವಾದುದೆಂದು ಹೇಳದೇ ನಡೆಯುವುದಿಲ್ಲ) ಓರ್ವ ಅಪರಾಧಿಗೆ ಮರಣದಂಡನೆಯನ್ನು ಈ ರೀತಿ ವಿಧಿಸುತ್ತಿತ್ತು—

"........ನನ್ನು ಗಲ್ಲಿಗೇರಿಸಬೇಕು"

ಆದರೆ ಅವನಪರ ವಕಾಲತ್ತು ವಹಿಸಿದ (ನ್ಯಾಯಪರವಲ್ಲ. ಹೆಚ್ಚಿನ ಫೀಜು ಪರವೆಂದು ಹೇಳಬೇಕಾಗಿಲ್ಲ) ನ್ಯಾಯವಾದಿ (ಅನ್ಯಾಯಕ್ಕಾಗಿ ಹೋರಾಡಿದರೂ, ಈ ಹೆಸರೇ ರೂಢಿಯಲ್ಲಿದೆ. ಎಕ್ಸ್‌ಪ್ರೆಸ್ ಟ್ರೇನನ್ನು ಮೀರುವ ನಡಿಗೆ ಇರುವ ಸ್ತ್ರೀಯನ್ನು ಮಂದಗಮನೆಯೆಂದು ಕರೆಯುವಂತೆ) ಎಷ್ಟು ಜಾಣ (ಕಪಟಿ ಎಂದರೆ ಸಿಟ್ಟು ಬರುವುದು ಸ್ವಾಭಾವಿಕ) ನಿದ್ದನೆಂದರೆ, ಮರಣದಂಡನೆಯ ಉದ್ದೇಶವನ್ನೇ ಮರೆತು. ಅದನ್ನು ಅಕ್ಷರಶಃ ವ್ಯಾಖ್ಯಾನಿಸಿ, ಆ ಅಪರಾಧಿಯನ್ನು ಉಳಿಸಿದನಂತೆ— ಅಂದಿನಿಂದ ಮರಣದಂಡನೆಯ ತೀರ್ಪು ಈ ರೀತಿ ಬರತೊಡಗಿತು"........ನನ್ನು ಸಾಯುವವರೆಗೆ ಗಲ್ಲಿಗೇರಿಸಬೇಕು"

ಇದೇ ಕಾರಣವಿರಬಹುದು ಭಾರತದೇಶದ ಸಂವಿಧಾನದ ಮೂಲಕ್ಕಿಂತಲೂ ತಿದ್ದುಪಡಿಗಳೇ (amendments ಎಂದರೆ ಬೇಗ ಅರ್ಥವಾದೀತು) ಹೆಚ್ಚಾಗಿವೆ. ಮೇಲಿನ ಒಂದು ಸಣ್ಣ ಘಟನೆಯನ್ನು ಅವಲೋಕಿಸಿದರೆ ಕಾನೂನಿನ ಕ್ಷೇತ್ರದಲ್ಲಿ ಉದ್ದೇಶಕ್ಕೆ ಎಳ್ಳಷ್ಟೂ ಮಹತ್ವವಿಲ್ಲವೆಂದು ಸ್ವಾಭಾವಿಕವಾಗಿಯೇ ನಮಗೆ ವೇದ್ಯ ವಾಗುತ್ತದೆ. ಪ್ರತಿಯೊಂದು ಕಾನೂನಿನ (act) ಉಪೋದ್‌ಘಾತ (preamble) ದಲ್ಲಿ ಆ ಕಾನೂನು ಹೇಗೆ ಸಾಮಾಜಿಕ ನ್ಯಾಯಕ್ಕಾಗಿ ಉದ್ದಿಷ್ಟವಾಗಿದೆಯೆಂದು ತಿಳಿಸಿದ್ದರೂ ಕೂಡ ಕಕ್ಷಿಗಾರರಿಗೆ ಅನುಕೂಲವಾಗುವ ಹಾಗೆ ತಮ್ಮದೇ ಆದ ವ್ಯಾಖ್ಯಾನಮಾಡಲು ನ್ಯಾಯವಾದಿಗಳಿಗೆ ಆಸ್ಪದವಿದ್ದೇ ಇದೇ. (ಹೆಚ್ಚಿನ ರಕ್ಷಣೆ ಸಿಕ್ಕರೆ, ಆಷಾಢ ಮಾಸದಲ್ಲಿಯೂ ಸಹ ಮದುವೆ ಮುಹೂರ್ತವನ್ನು ಪುರೋಹಿತರು ತೋರಿಸಿಕೊಡುವುದನ್ನಿಲ್ಲಿ ನೆನೆಯಬಹುದೇ?) ಏಕೆಂದರೆ ಆ ಪ್ರಿಅಂಬಲ್ ಕಾನೂನಿನ ವ್ಯಾಖ್ಯಾನಕ್ಕೆ ಸಹಾಯಕವಾಗಿದ್ದರೂ ಸಹ ಕಾನೂನಿನ ಭಾಗವಾಗಿಲ್ಲವೆಂದೇ ಹೇಳಲಾಗುತ್ತಿದೆ.

ಪ್ರತಿಯೊಂದು ಕಾಯ್ದೆ ಜಾರಿಗೆ ಬಂದಾಗಲೂ ಅದರ ಉದ್ದೇಶಕ್ಕೆ ಕಿಂಚಿತ್ತೂ ಲಕ್ಷ್ಯಗೊಡದೇ ಅದರಲ್ಲಿನ ರಚನಾಗತ ಲೋಪದೋಷಗಳನ್ನು ತೋರಿಸಿಯೋ ಅಥವಾ ತಮ್ಮ ಕಕ್ಷಿಗಾರರಿಗೆ ಅನುಕೂಲವಾಗುವಂತೆ ವ್ಯಾಖ್ಯಾನಿಸಿಯೋ ತಮ್ಮ ವಿದ್ಯಾ ಪ್ರೌಢಿಮೆಯನ್ನು ಮೆರೆಸಿ (ಪ್ರತಿವಾದಿಯ ವಕೀಲ ಅಷ್ಟು ಸಮರ್ಥನಿರದಿದ್ದರೆ) ತಮ್ಮ ಜೀವಿತೆಯನ್ನು ಸುಖವಾಗಿ ಮುಂದು ವರೆಸಿಕೊಂಡು ಹೋಗುತ್ತಾರೆ. ಈ ವಿಷಯ ಅವರು ಹೆಚ್ಚು ಗರ್ವಪಟ್ಟರೆ ಆಶ್ಚರ್ಯವಿಲ್ಲ. ಹೀಗಾಗಿ ಕಾನೂನೊಂದು ಕತ್ತಿ (ನಮ್ಮ ಭಾಷೆ ಕತ್ತೆಗಳಿಗೆ ತಿಳಿಯದಿದ್ದುದರಿಂದ ನಮ್ಮ ಕ್ಷೇಮ), ಎಂಬ ಪ್ರಮಾದಕ್ಕೆ ನಮ್ಮೀ ನ್ಯಾಯವಾದಿಗಳೇ ಬಹುಮಟ್ಟಿಗೆ ಕಾರಣವೆಂದರೆ, ಅವರದನ್ನು ಪ್ರಶಂಸೆಯೆಂದು ಭಾವಿಸುವ ವಿಶಾಲ ಮನಸ್ಸುಮಾಡಿದರೆ, ನಮ್ಮಂಥ ಬಡಜೀವಿಗಳು (ಅವರ ಬಳಿಹೋಗಲು ಸಾಕಷ್ಟು ದುಡ್ಡು ಇಲ್ಲದ್ದರಿಂದ) ಬದುಕಿಯಾರು. ಆದರೆ ನಮ್ಮ ಪುರಾಣಪುರುಷರು (ಮಾನವ ಕಲ್ಪಿತ ದೇವತೆಗಳು ಸಹಿತ) ವಕೀಲ ವೃತ್ತಿಯಲ್ಲಿ ಎಷ್ಟೂ ಕಡಿಮೆಯಿರಲಿಲ್ಲವೆಂಬ ಸಂಗತಿಯನ್ನು ನನ್ನ ನ್ಯಾಯವಾದಿ ಮಿತ್ರರು ಮರೆಯದಿರಲೆಂದು ವಿನಮ್ರತೆಯಿಂದ ಅವರ ಗಮನಕ್ಕೆ ತರಬಯಸುತ್ತೇವೆ. ಅವರಿಗೆ ಎಂದಾದರೂ ಪುರುಸೊತ್ತು ಸಿಕ್ಕರೆ (ಅದನ್ನೊಂದು ಬಿಟ್ಟು ಅವರಿಗೆ ಯಾವುದಕ್ಕೂ ಕೊರತೆ ಇಲ್ಲ) ನಮ್ಮ ಪುರಾಣಗಳನ್ನು, ರಾಮಾಯಣ ಮುಂತಾದ ಮಹಾಕಾವ್ಯಗಳನ್ನು (ಇವೆಲ್ಲಾ ಅವರಿಗೆ ಫಾರಿನ್ ತಾನೇ!) ಅವಲೋಕಿಸಿದರೆ ನನ್ನ ಮಾತಿನ ಸತ್ಯತೆ ವೇದ್ಯವಾಗದಿರದು. ಅವರಿಗೆ ಪ್ರತಿಯೊಬ್ಬರೂ ತಿಳಿದಂತೆ ಈ ಪುರುಸೊತ್ತಿನ ಅಭಾವವಿರುವುದರಿಂದಾಗಿ ನಾನು ಕೆಲವೊಂದು ಪ್ರಸಂಗಗಳ ವಿವರವನ್ನಿಲ್ಲಿ ಕೊಡಬಯಸಿದರೆ ಅಪಾರ್ಥ ಮಾಡಿಕೊಳ್ಳಲಿಕ್ಕಿಲ್ಲವೆಂದು ನನ್ನ ಭಾವನೆ. ಆ ಪುರಾಪುರುಷ (ಸ್ತ್ರೀಸಹಿತ)ರು ಕಾಯ್ದೆಯ ಆಶಯದ ವಿರುದ್ಧವಾದುವನ್ನು ವ್ಯಾಖ್ಯಾನಿಸುವಲ್ಲಿ ಸಫಲವಾಗಿರುವುದನ್ನು ಮರೆಯುವಂತಿಲ್ಲ.

ಒಂದು ಕೇಸ್ ;—

ಯಾರ ಅಂಕೆಗೂ ಒಳಪಡದ ಲಂಕಾಧಿಪತಿ ರಾವಣನ ಕೇಸನ್ನೇ ತೆಗೆದುಕೊಳ್ಳೋಣ. ಬ್ರಹ್ಮನಿಂದ ವರಪಡೆಯಲು ಹತ್ತು ಸಾವಿರ ವರ್ಷಗಳವರೆಗೆ (ಸಾವಿರವೇಕೆ, ಈಗ ಲಕ್ಷಕ್ಕೂ ಲಕ್ಷ್ಯಕೊಡದಷ್ಟು ನಾವು ಮುಂದುವರಿದಿದ್ದೇವೆ ಆರ್ಥಿಕವಾಗಿ) ಘನಘೋರ ತಪಸ್ಸನ್ನು ಆಚರಿಸಲು (ಅವನ ಸ್ಥಿರ ಚಿತ್ತದ ಪರಿಚಯವಿದ್ದ ಇಂದ್ರನು ತಪೋಭಂಗಕ್ಕಾಗಿ ಸುಕುಮಾರ ಆಯುಧವಾದ ಯಾವುದೇ ಅಪ್ಸರೆಯನ್ನು ಕಳಿಸಲಿಲ್ಲವೆಂಬುದು ಗಮನಾರ್ಹ. ಋಷಿ ಮುನಿಗಳ ತಪೋಭಂಗದ ಪ್ರಸಂಗವನ್ನು ಇನ್ನೊಮ್ಮೆ ಪ್ರಸ್ತಾಪಿಸಲಾಗುವುದು) ಅದರಿಂದ ಸಂಪ್ರೀತನಾದ ಬ್ರಹ್ಮದೇವನು (ಈಗಿರುವಂತೆ

ಆಗಲೂ ಭಗವಂತನ ವಿಷಯುಕ್ಕೆ ನಿಷ್ಠೆ ಅಪರೂಪವೆಂದೇ ಹೇಳಬಹುದು) ಪ್ರತ್ಯಕ್ಷನಾಗಿ ವರಬೇಡಲು ಕೇಳಲಾಗಿ, ರಾವಣನು ಅಮರತ್ವವನ್ನು ಪ್ರಾರ್ಥಿಸಿದನು. (ಇದು ಮುಂದೆ ಅವನು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಕೇಳಿದ ವರಕ್ಕೆ ಪ್ರಿಅಂಬಲ್ ಎನ್ನಬಹುದು) ಆಗ ಬ್ರಹ್ಮನು ಸ್ವಲ್ಪ ಯೋಚಿಸಿ, ಅಂದರೆ ಲಾಯರ್ ಬುದ್ಧಿಯನ್ನು ಓಡಿಸಿ ಸರ್ವಾಮರತ್ವ ಸಾಧ್ಯವಿಲ್ಲವೆಂದು ನುಡಿಯುತ್ತಾನೆ. (ಈಗಲೂ ಪಾರ್ಲಿಮೆಂಟಿನಲ್ಲಿ ಯಾವುದೇ ಕಾಯಿದೆ ತಿದ್ದುಪಡಿಯಿಲ್ಲದೇ ಪಾಸಾಗುವುದಿಲ್ಲ).

"ನಾಸ್ತಿ ಸರ್ವಾಮರತ್ವತ್ತೇವರ ಮನ್ಯಂ ತೃಣೀಸ್ವಮೇ!"

ಆಗ ನಿರುಪಾಯನಾದ ರಾವಣನು ಗಂಧರ್ವಾದಿಗಳಿಂದ ಮರಣ ಒದಗದಿರಲೆಂದು ಕೇಳಿ, ಮಾನವರ ಬಗ್ಗೆ ಇರುವ ತನ್ನ ಉಪೇಕ್ಷೆಯನ್ನು ವ್ಯಕ್ತಪಡಿಸುತ್ತಾನೆ.

"ತೃಣ ಭೂತಾಹಿತೇ ಮಾನ್ಯೇ ಪ್ರಾಣಿನೋಮಾನುಪಾದಯಃ"


'ತಥಾಸ್ತು' ಎಂದು ನುಡಿದು ಬ್ರಹ್ಮನು ಕಾರ್ಯ ಬಾಹುಳ್ಯದಿಂದಾಗಿ ತಡ ಮಾಡದೇ ಅಂತರ್ಧಾನ ಹೊಂದುತ್ತಾನೆ. (ಇದನ್ನವಲೋಕಿಸಿಯೇ ನಾಟಕಗಳಲ್ಲಿ 'ನಿರ್ಗಮಿಸಿ' ಪುನಃ 'ಪ್ರವೇಶಿಸಿ' ಎಂದು ಒಂದೇ ಉಸುರಿನಲ್ಲಿ ರಂಗ ಸೂಚನೆಯನ್ನು ಕವಿಗಳು ಕೊಡುತ್ತಿರಬಹುದು)

ಈ ಒಂದೇ ಪಾಯಿಂಟನ್ನು (ವಕೀಲರಿಗೆ ಇದೇ ದೊಡ್ಡದು) ಉಪಯೋಗಿಸಿ ದೇವತೆಗಳ ಅಹವಾಲನ್ನು ಕೇಳಿದ ವಿಷ್ಣು ಭಗವಂತನು (ಫೀಜು ಎಷ್ಟು ಪಡೆದನೆಂಬ ಉಲ್ಲೇಖವಿಲ್ಲ) ಸುಪ್ರೀತನಾಗಿ ಮಾನವರೂಪ (ರಾಮಾಯಣದಲ್ಲಿ) ಹೊಂದಿ ರಾವಣ ವಧ ಮಾಡಿದ ಘಟನೆ ಕಾನೂನು ಕತ್ತೆ ಎಂಬುದನ್ನು ಸಮರ್ಥಿಸದೇ ಇರದು. ತಾನು ಮಾನವರಿಂದಲೇ ಹತನಾಗಬೇಕೆಂಬ ಆಸೆ ಅಥವಾ ಉದ್ದೇಶ ರಾವಣನಿಗಿತ್ತು ಎಂದು ಯಾವ ಮೂರ್ಖನೂ ಊಹಿಸಲಾರ. ಈ ಎಲ್ಲ ಅವಾಂತರಗಳನ್ನು ನೋಡಿದರೆ ದೇವತೆಗಳಿಗೆ ಅಭಿಪ್ರಾಯ ಅಥವಾ ಉದ್ದೇಶ (Intention)ದ ಅರಿವಿದ್ದರೂ ಸಹ ಅದರ ಉಪೇಕ್ಷೆ ಮಾಡುವುದನ್ನು ಕಾಣುತ್ತೇವೆ.

(ಉತ್ತರಾರ್ಧ ಮುಂದಿನ ಸಂಚಿಕೆಯಲ್ಲಿ)

ಮುಕ್ತಿ ಎಂದು?

—ಆರತಿ



ಸಗ್ಗದಾ ಬಾಗಿಲಲಿ ನಿಂದಿಹನು ತಲೆಬಾಗಿ
ದೈನ್ಯದಿಂ ಕೇಳುತಲಿ ಇಂದ್ರ ಕಿಂಕರನ

"ಪೇಳಣ್ಣ ನೋಟಗನೆ, ಒಳಗೆ ಬರಲಪ್ಪಣೆಯೇ?
ಇಲ್ಲದಿರೆ ನಡೆವೆ ನಾ ನರಕದೆಡೆಗೆ!"

''ಯಾವ ಪುಣ್ಯವನೆಸಗಿ, ಇಲ್ಲಿ ಬಂದಿಹೆ ನೀನು?
ಯಾವ ಸುಕೃತಕಾಗಿ ಸ್ವರ್ಗ ಲಭ್ಯ?"

''ಸುಕೃತವೋ, ಮತ್ತೇನೋ ನನಗೊಂದು ತಿಳಿಯದು
ನಡೆಸಿದ್ದೆ ಭುವಿಯಲ್ಲಿ ಸಣ್ಣ ಉದ್ದಿಮೆಯ!"

ಕರುಣಾರ್ದ್ರ ದೃಷ್ಟಿಯಿಂ, ಬಾಗಿಲೆರಡನುತೆರೆದು
ಇಂತೆಂದ ಕರುಣಾಳು ಇಂದ್ರ ಕಿಂಕರನು

''ಒಳಗೆ ಬಾ ಬಡಪಾಯಿ. ಸಗ್ಗ ಸುಖ ನಿನದಿನ್ನು
ನಿನ್ನ ಪಾಲಿನ ನರಕ ಭುವಿಯೊಳಾಯ್ತು!"

ನಗು ಗನ್ನಡಂ ಗೆಲ್ಗೆ

—ಲೀಲಾಮಿರ್ಲೆ

ನಗುವ ನಗಿಸುವ, ನಗಿಸಿ ನಗುತ ಬಾಳುವ ವರವನ್ನು ಭಗವಂತ ರಾಶಿಯವರಿಗೆ ಜಾಸ್ತಿಯಾಗೇ ದಯಪಾಲಿಸಿದ್ದ.

ಹಾಸ್ಯವನ್ನು ಗಂಭೀರ ದೃಷ್ಟಿಯಿಂದ ನೋಡಿದವರಲ್ಲಿ ರಾಶಿ ಮೊದಲಿಗರು. ಬಾಳನ್ನು ಹಗುರು ಮಾಡುವುದರಲ್ಲಿ ಹಾಸ್ಯದ ಪಾತ್ರ ತುಂಬಾ ದೊಡ್ಡದೆಂದು ನಂಬಿದ್ದ ಅವರು. ಹಾಸ್ಯದ ಬಗ್ಗೆ ಹೇಳಿರುವ ಕೆಲವು ಮಾತುಗಳನ್ನು ಅಪರಂಜಿ ನಮ್ರತೆಯಿಂದ ಸ್ಮರಿಸುತ್ತಾಳೆ,

''ಕೆಣಕವಾಡಿ, ಅಣಕುಮಾಡಿ, ಕುಹಕಿಸಿ, ವ್ಯಂಗ ಹೂಡಿ, ಮನಸ್ಸಿನಲ್ಲಿನ ನಂಜನ್ನು ಪರಿಹರಿಸಿಕೊಳ್ಳುವುದು ಶಾಸ್ತ್ರೀಯವಾಗಿ ಒಪ್ಪುವ ಸಾಧನೆ, ಇವೆಲ್ಲವೂ ಔಷಧಿ ಇದ್ದಂತೆ, ಔಷಧಿ–ತಯಾರಿಸಿದವನಿಗೆ ಸುಖ ಸಮಾಧಾನ ಕೊಟ್ಟೇ ಕೊಡುತ್ತದೆ. ಸಮಾನ ಧರ್ಮವಿರುವವರು, ಸೇವಿಸಿದರೆ, ಅವರಿಗೂ ನೆಮ್ಮದಿ ಉಂಟು. ಔಷಧಿಯ ತೀವ್ರತೆ, ಪರಿಣಾಮ ಶಕ್ತಿ, ಮನಸ್ಸಿನಲ್ಲಿನ ನಂಜನ್ನೇ ಅವಲಂಬಿಸಿ ಕೊಂಡಿರುತ್ತೆ......

ಎಲ್ಲರೂ ತಮ್ಮ ತಮ್ಮ ಅನುಭವಗಳಿಗೆ ಈ ಮಾತಿನ ಮೋಡಿಯನ್ನು ತೊಡಿಸಿ, ಅಣಕವಾಡಿಕೊಂಡು, ಮನಸ್ಸಿನ ನೆಮ್ಮದಿಯನ್ನು ತಾತ್ಕಾಲಿಕವಾಯಾದರೂ ಪಡೆಯಬಹುದು........

ತನ್ನನ್ನು ತಾನೆ ಕಂಡು ನಕ್ಕು, ತನ್ನ ಉದ್ಧಾರವನ್ನು ತಾನೇ ಸಾಧಿಸಿಕೊಳ್ಳಲು ಈ ರೀತಿಯ ಔಷಧ ಪ್ರಯೋಗವು ಬಲು ಸಹಕಾರಿ......

ಸಹಸ್ರನಾಮಿಯ ಒಂದು ಹೆಸರು 'ಕೆಣಕವಾಡು' ಆಗಿರಬಹುದು ಎಂದೇ ನನಗನ್ನಿಸುತ್ತದೆ, ಅಂತಹ ಮನೋಧರ್ಮವಿರುವವರಿಗೆ ಆ ಹಾದಿಯಲ್ಲೇ ಆತ್ಮದ ಉದ್ಧಾರವಾಗಬಹುದೆಂದೂ ಅನ್ನಿಸುತ್ತದೆ ....

ಬಾಳನ್ನೇ ನಗು ದೃಷ್ಟಿಯಿಂದ ನೋಡಿದರೆ ಉತ್ತಮ ನಗುವು ಮೂಡುತ್ತದೆ. ಬಾಳನ್ನು ನಡೆಸಿದ, ಈಗ ನಗುವ 'ತಾನು' ಯಾರು? ಏನು? ಏತಕ್ಕೆ? ಎಂಬ ಪ್ರಶ್ನೆಗಳಿಗೆ ಉತ್ತರ ದೊರಕುತ್ತದೆ. ಆಗ ದೇವರು ಎದುರು ಕಾಣಿಸಿದ, ಪ್ರತ್ಯಕ್ಷವಾದ ಎನ್ನಬಹುದು. ಕಾಲಾನುಕಾಲದಲ್ಲಿ ಈ ಚಿಂತನೆಯು ನಗುವಿನ ಮೂಲಕ ಲಭಿಸಲಿ ಎಂದು ಹಾರೈಸುತ್ತೇನೆ......"

ಈ ಹಿರಿ ಆತ್ಮದ ಆಶೀರ್ವಾದದಿಂದ, ನಗಿಸುವ ಈ ಪರಧರ್ಮದಲ್ಲಿ ಅಪರಂಜಿಯ ಅಳಿಲುಸೇವೆ ಸಾರ್ಥಕವಾಗಲಿ.



"ಸೊಂಟಕ್ಕೆ ಇಂಚು ಪಟ್ಟಿ ಬೇರೆ! ನಮ್ಮ ಹೊಟ್ಟೆ ಉರಿಸೋಕೆ!"

ಮಂದಾರ

[ಧಾರಾವಾಹಿ] —ರಮ್ಯ

[ಇಲ್ಲಿಯವರೆಗೆ : ಮಂದಾರ ಕಿಂಗ್ ಲಿಯರನ ಮಗಳು. ಹ್ಯಾಂಲೆಟ್, ಮ್ಯಾಕ್‌ಬೆತ್, ಒಥೆಲೋ ಅವಳನ್ನು ಬಯಸುವ ಯುವಕರು. ಮಂದಾರ ಪ್ರೀತಿಸಿದ್ದು ಹ್ಯಾಂಲೆಟ್‌ನನ್ನು. ಅವನೊಡನೆ ಅವಳು ಬಣಪೇಕಲ್ ಕಾಲೇಜಿನ ಯುಗಳ ಗೀತೆ ಸ್ಪರ್ಧೆಯನ್ನು ಗೆದ್ದು, ಪೋಲಾಳ್ವ ವಿಶ್ವವಿದ್ಯಾಲಯದ ಸ್ಪರ್ಧೆಗೆಂದು ಪೋಲಾಳ್ವ ನಗರಕ್ಕೆ ಬಂದಳು. ಮಂದಾರನಿಗೆ ಸಿನಿಮಾ ನಾಯಕಿ ಅಥವಾ ಹಿನ್ನೆಲೆ ಗಾಯಕಿಯಾಗುವ ಗೀಳು. ಕಿಂಗ್‌ಲಿಯರ್, ಒಥೆಲೋ ಇಬ್ಬರೂ ಪೋಲಾಳ್ವ ನಗರಕ್ಕೆ ಬಂದು ಅವಳ ಆಡಿಷನ್ ಹಾಗೂ ಸ್ಕ್ರೀನ್ ಟೆಸ್ಟ್‌ಗಳಿಗೆ ವ್ಯವಸ್ಥೆ ಮಾಡಿದ್ದಾರೆ. ಆದರೆ ಸ್ಪರ್ಧೆಯ ಹಿಂದಿನ ರಾತ್ರಿ ಅವಳ ಅಪಹರಣವಾಯಿತು. ಅವಳನ್ನು ಹುಡುಕಿಕೊಂಡು ಕಾಲೇಜ್ ಪ್ರಿನ್ಸಿಪಾಲ್ ವೆಂಕಟಪ್ಪ, ವಿದ್ಯಾರ್ಥಿ ತಂಡದ ನಾಯಕ ರಾಜೀವ್ ಹೊರಟರು. ಆಕಸ್ಮಿಕವಾಗಿ ಹ್ಯಾಂಲೆಟ್, ಮಂದಾರನನ್ನು ಕೂಡಿದ್ದ ಕೋಣೆಯ ಮುಂದ ನಿಂತಿದ್ದಾನೆ. ಅವಳನ್ನು ಅಪಹರಿಸಿದವನ್ನು ಗಿರಿಜಾಪತಿ, ಅವಳ ಮೇಲೆ ಕಣ್ಣಿಟ್ಟವರು ಕದಿರಪತಿ, ಅಣ್ಣಯ್ಯ.]

ಹ್ಯಾಂಲೆಟ್, ಮೂಕವಿಸ್ಮಿತನಾದ. ಅರಸಿ ಹೊರಟಿದ್ದ ಬಳ್ಳಿ ಕಾಲಿಗೆ ತೊಡಕಿದಂತೆ ಆಗಿತ್ತು. ಆದರೂ ಅವನ ಹೃದಯದ ಪ್ರೇಮರಾಗದಲ್ಲಿ ಯಾವುದೋ ಅಪಸ್ವರ ಹೊರಟಿತ್ತು. ಅದನ್ನು ಗಮನಿಸದೆ ಹ್ಯಾಂಲೆಟ್ ಸ್ಪರ್ಧೆಗಾಗಿ ಆಯ್ಕೆಯಾಗಿದ್ದ ಭಾವಗೀತೆಯ ಪೂರನೆಯ ಚರಣ ಗೀತೆಯನ್ನು ತಾನೇ ರಚಿಸಿ, ಕಾಮಪಲಾಸ್ ರಾಗಕ್ಕೆ ಅಳವಡಿಸಲಾರಂಭಿಸಿದ್ದ.

ನೇಹ ಮೋಹ ದಾಟದಲ್ಲಿ ಅಳಲು ಬಾರದೇನು
ಆ ವಸಂತ. ಶುಭ್ರಶರದ ಹಿಮದಿ ಮುಳುಗವೇನು
ರೂಪ ಪಾಪ ಮೋದ ನೋವಿನಲ್ಲಿ ಹೊರಳವೇನು
ಕುಂದ ಕುಸುಮ ಮಾಲೆ, ಬಾಲೆ ಒಲ್ಲೆಯೇನು ನೀನು
ಬಂಟ ಗೆಳತಿ, ತಂದೆ ನಿದೋ............

ಶುದ್ಧ ಸ್ವರವನ್ನರಸುತ್ತಾ ತಾರಕ್ಕೇರಿದ ಅವನು ತನ್ನ ಹಿಂದೆ ಮೋಟರ್ ಬೈಕ್

ಬಂದುದನ್ನು ಗಮನಿಸಿರಲಿಲ್ಲ. ನಾಯಿಗಳ ಬೊಗಳುವಿಕೆ ಅವನನ್ನು ಧರೆಗೆಳೆಯಿತು. ಮೋಟರ್ ಬೈಕ್, ಮಂದಾರನ ಕೋಣೆಯ ಮುಂದೆ ನಿಂತಿತು. ಬೀಗ ತೆರೆದು ಒಬ್ಬ ಒಳಹೊಕ್ಕ. ಇದ್ದಕ್ಕಿದ್ದಂತೆ ಪವರ್ ಫೇಲ್ಯೂರ್, ಗಾಬರಿಯಿಂದ ಹ್ಯಾಂಲೆಟ್ ಕೋಣೆಯ ಬಾಗಿಲತ್ತ ನುಗ್ಗಿದ. ಅವನು ಬಾಗಿಲನ್ನು ತಲುಪುವಷ್ಟರಲ್ಲಿ ಹಿಂದೆ ಇನ್ನೊಂದು ಮೋಟರ್ ಬೈಕ್ ಬಂದಿತು. ಹ್ಯಾಂಲೆಟ್ ಅದನ್ನು ಗಮನಿಸದೆ,

'ಮಂದಾರ, ಬಂದಿದ್ದೇನೆ'.

'ಯಾರು ಶಿವೂ ?' ಕತ್ತಲು ಉತ್ತರಿಸಿತು. ಹ್ಯಾಂಲೆಟ್ ಕತ್ತಿನ ಹಿಂದೆ 'ಎಲೇ ಗಿರಿಯಾ ! ನಮಗೆ ಬುದ್ಧಿ ಕಲಿಸ್ತೀಯಾ' ಎಂದು ಅಬ್ಬರಿಸಿದ ಸದ್ದು, ತಲೆಯ ಹಿಂಭಾಗಕ್ಕೆ ಏನೋ ಪೆಟ್ಟು ಬಿತ್ತು. ಹ್ಯಾಂಲೆಟ್ ನಕ್ಷತ್ರ ಲೋಕವನ್ನು ಕಂಡ. ಕಾರ್ಗತ್ತಲೆ ಆವರಿಸಿತು.

o o o o o

ಹ್ಯಾಂಲೆಟ್ ಮಂದಾರ ಜೋಡಿ ಪೋಲಾಳ್ವ ವಿಶ್ವವಿದ್ಯಾಲಯ ಮಟ್ಟದ ಸ್ಪರ್ಧೆಯನ್ನು ಗೆದ್ದಿತು. ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ ರಾಜೀವ ವಿಶ್ವವಿದ್ಯಾಲಯದ ಪ್ರಪ್ರಥಮನಾದ.

ವಿದ್ಯಾರ್ಥಿಗಳ ಉತ್ಸಾಹ ಮೇರೆ ಮೀರಿತ್ತು. ಹೋಟೆಲ್ ಹೈಜಿಂಕ್ಸ್‌ನಲ್ಲಿ ಸಿಹಿ, ಕಾರ, ಕಾಫಿ ಸಮಾರಂಭ ಏರ್ಪಟ್ಟಿತ್ತು. ಅವಳು, ಇವನು, ಮತ್ತೊಬ್ಬ, ಇನ್ನೊಬ್ಬಳು ಹಲವು ರೀತಿಯ ಹೊಗಳಿಕೆಗಳಿಂದ ವಿಜೇತರನ್ನು ಹೊಗಳಿದರು. ರಾಜೀವ, ಪೃಥ್ವೀರಾಜ ಕಪೂರ್ ಎಂದೂ, ಹ್ಯಾಂಲೆಟ್ ಮುಖೇಶ್ ಹಾಗೂ ಬಾಲ ಮುರಳೀಕೃಷ್ಣರ ಛಟ್ಟಿ ಎಂದೂ ಮಂದಾರ ಜಾನಕಿಯೆಂದೂ ಹಲವರು ಹೊಗಳಿದರೆ, ಬಣವೇ ಕಲ್ಲು ದಕ್ಷಿಣ ಭಾರತದ ಸಂಗೀತ ರಾಜಧಾನಿಯೆಂದು ಪೋಲಾಳ್ವ ನಗರದ ಪ್ರೊಫೆಸರೊಬ್ಬರು ಪ್ರಶಂಸಿದರು.

ಹ್ಯಾಂಲೆಟ್ ಮಾತನಾಡದೆ ಗಂಭೀರವಾಗಿ ಕುಳಿತಿದ್ದ. ವೆಂಕಟಪ್ಪನವರು ಸಭೆಗೆ ಬಂದಿರಲೇ ಇಲ್ಲ. ತಂಡದವರೆಲ್ಲರೂ ಸಿನಿಮಾ ನೋಡಿ ರಾತ್ರಿ ಹತ್ತುವರೆ ಗಂಟೆಗೆ ಬಣವೇಕಲ್ಲಿಗೆ ಹೊರಡಬೇಕೆಂಬ ತೀರ್ಮಾನವಾಯಿತು.

ಹ್ಯಾಂಲೆಟ್, ತಲೆ ನೋವೆಂದು ಸಿನಿಮಾಕ್ಕೆ ಹೋಗಲಿಲ್ಲ. ರಾಜೀವ ಉಳಿದೆಲ್ಲರನ್ನೂ ಥಿಯೇಟರಿಗೆ ಕಳಿಸಿ ಹ್ಯಾಂಲೆಟ್ ಜೊತೆಯಲ್ಲಿ ಉಳಿದ. ಇಬ್ಬರೂ ಹೋಟೆಲ್ ಹೈಜಿಂಕ್ಸ್‌ಗೆ ಮರಳಿ ಕಾಫಿ ಕುಡಿದು ಸಿಗರೇಟು ಸೇದುತ್ತಾ ಕುಳಿತರು. ಹ್ಯಾಂಲೆಟ್ ಹೇಳಿದ.

" ಒಂದೆರಡು ವಿಷಯಗಳು ನನಗೆ ಸ್ಪಷ್ಟವಾಗಲಿಲ್ಲ. ಮುಂದಾರ ನಿಜಕ್ಕೂ ನಮ್ಮ ಕಾಲೇಜಿನ ಬೆಸ್ಟ್ ಸಿಂಗರ್. ಅವಳ ಗಾಯನ ಈ ದಿನ ಮ್ಯಾಗ್ನಿಫಿಸೆಂಟ್, ಆದರೆ ಇಷ್ಟು ದಿನ ಅವಳೇಕೆ ಈ ಮಟ್ಟ ಮುಟ್ಟಿರಲಿಲ್ಲ ? "

ರಾಜೀವ " ಡ್ಯಾಂ ಫೂಲ್ " ಎಂದ.

ಹ್ಯಾಂಲೆಟ್ ' ಮಗನೇ, ನಿನಗೆ ಹೊಟ್ಟೆ ಕಿಚ್ಚು ' ಎಂದ.

" ಯಾರ ಮೇಲೆ ? "

" ಯಾಕೆ ? "

"ನನ್ನ ಮೇಲೆ"

" ಮುಂದಾರ ನನ್ನ ಲವ್ ಮಾಡ್ತಾಳೆ."

" ನಾನ್ಸೆನ್ಸ್"

" ಹಾಗಾದರೆ ಅವಳ ಮೆರಿಟ್ ನೀನೇಕೆ ರೆಕಗ್ನೈಸ್ ಮಾಡುತ್ತಾ ಇಲ್ಲ ? "

" ಅವಳಿಗೆ ಮೆರಿಟ್ ಇಲ್ಲ ಅದಕ್ಕೆ."

" ಆದರೆ ಯೂನಿವರ್ಸಿಟಿ ಲೆವೆಲ್‌ನಲ್ಲಿ........"

" ಅದು ನಿನ್ನ ಗಾಯನಕ್ಕೆ ಸಿಕ್ಕದ್ದು. ಕಾಮುಪಲಾಸ್ ಪ್ರಭಾವ."

" ನಾನೇನೂ ಅಂಥಾ ಗ್ರೇಟ್ ಸಿಂಗರ್ ಅಲ್ಲ."

" ನಿಜ, ಆದರೆ ನಿನಗೆ ತಿಕ್ಕಲ್ ಹಿಡಿದಿದೆ."

" ಯಾವ ತಿಕಲ್ ? "

" ಲವ್ ಅಂತಿಯಲ್ಲಾ ಆದರದ್ದು."

" ನೀನು ಯಾವುದಾದರೂ ಮಠ ಸೇರಿ ಸ್ವಾಮಿಯಾಗು ! "

" ಯಾರಿಗೆ ಬೇಕು, ಆ ತಟವಟ ? "

" ನನಗೆ ಸ್ಪಷ್ಟವಾಗಿ ನೆನಪಿದೆ. ನಿನ್ನೆ ರಾತ್ರಿ ನಾನು ತಿರುಗಾಡುತ್ತಾ ಈ ಊರಿನ ಒಂದು ಮೂಲೆಗೆ ಹೋದೆ. ಅಲ್ಲಿ ಲಿರಿಕ್‌ನ ಮೂರನೇ ಚರಣ ಕಂಪೋಸ್ ಮಾಡಿದೆ. ಅಲ್ಲೊಂದು ಕೋಣೆಯಲ್ಲಿ ಮಂದಾರ ಇದ್ದಳು. ನಾನು ಆ ಕೋಣೆ ಹೊಗುತ್ತಿದ್ದಾಗ ಯಾರೋ ತಲೆಗೆ ಬಡಿದರು........"

" ನಿನಗೆ ಬಿದ್ದ ಕನಸು ಅದು,"

" ನಾನ್ಸೆನ್ಸ್. ನಾನೇ ವಸಂತನನ್ನು ಕೇಳಿದೆ. ಅವಳು ಮಂದಾರ ಎಲ್ಲಿಗೋ ಹೋದಳೆಂದು ಹೇಳಿದಳು. ಅದೂ ಕನಸೇ ? "

" ಮತ್ತೆ ನೀನು ನಿನ್ನ ಕೋಣೆಯಲ್ಲಿ ಎದ್ದೆ. ಮಂದಾರ ಅವಳ ಕೋಣೆ ಯಿಂದಲೇ ಬಂದಳು. ನಿನಗೆ ಮಂದಾರ ಎಂದರೆ ಅಬ್ಸೆಷನ್."

" ಹೌದು magnificient ಅಬ್ಸೆಷನ್. ಹೆಣ್ಣು ಎಂದರೆ ಕೊಚ್ಚೆ ಎಂದು ತಿಳಿದಿರುವ ವೆಂಕಟಪ್ಪನವರು, ನೀನು ಮೈಸಾಜಿನಿಸ್ಟ್ಸ."

" ಹಾಗಾದರೆ ವಸಂತನನ್ನು ಕೇಳಿದೆಯಾ ? "

" ಕೇಳಿದೆ. ಅವಳು ನಕ್ಕು ಬಿಟ್ಟಳು."

" ಮಂದಾರನ ಬಗ್ಗೆ ನಿನ್ನ ಅಬ್ಸೆಷನ್ ಹೇಗಿದೆ ? "

"ಕೇಳೋ ಸ್ತ್ರೀ ದ್ವೇಷಿ, ನನ್ನ ತನು ಮನ ಧನಗಳನ್ನು ಮೂರು ದಳಗಳಾಗಿ ಉಳ್ಳ ಪುಷ್ಪವನ್ನು ಮಂದಾರನ ಪಾದತಲದಲ್ಲಿಟ್ಟು ಒಂದು ವರ್ಷವಾಯಿತು. ಬರಿಯ ಭಾವನೆಯಲ್ಲಲ್ಲ. ಸ್ಪಷ್ಟವಾಗಿ ವ್ಯಕ್ತಪಡಿಸಿ ಬಿಟ್ಟದ್ದೇನೆ. ಅವಳು ಆ ಹೂವನ್ನು ಕಣ್ಣಿಗೊತ್ತಿಕೊಂಡು, ತನ್ನ ಹೃದಯ ಮಂದಿರದಲ್ಲಿ........"

ಹ್ಯಾಂಲೆಟ್ ಇನ್ನೂ ಏನೇನನ್ನು ಹೇಳುತ್ತಿದ್ದನೋ: ಅಷ್ಟರಲ್ಲಿ ಹೋಟೆಲಿನ ಕೌಂಟರಿನಲ್ಲಿ ಒಥೆಲೋ ಬೀಗದ ಕೈ ತೆಗೆದುಕೊಂಡು ಮಹಡಿಯ ಮೆಟ್ಟಿಲನ್ನು ಹತ್ತುತ್ತಿದ್ದುದನ್ನು ನೋಡಿ ರಾಜೀವ ಹ್ಯಾಂಲೆಟ್‌ಗೆ ಇಲ್ಲೇ ಇರು ಬಂದೆ ಎಂದು ಹೇಳಿ ಅವನನ್ನು ಹಿಂಬಾಲಿಸಿದ. ಅವರು ಮಹಡಿ ಹತ್ತಿದ ಮೇಲೆ ಅವನೂ ಮೆಟ್ಟಿಲು ಹತ್ತಿದ. ಒಥೆಲೋ ಕೋಣೆಗೆ ಹೋದವನೇ ರಾಜೀವ ಬಾಗಿಲು ಹಾಕಿದ. ಬೋಲ್ಟನ್ನು ಜಡಿದ. ಒಥೆಲೋ ಜೇಬಿನಲ್ಲಿದ್ದ ಸಿಗರೇಟ್ ಪ್ಯಾಕನ್ನೆಳೆದು ಕೊಂಡು ಒಂದು ಬತ್ತಿ ಹೊತ್ತಿಸಿದ.

"ಇನ್ನೂ ನಿನಗೇನು ಕೆಲಸ ಇಲ್ಲಿ?" ಎಂದು ಜಬರ್ದಸ್ತಿನಿಂದ ಕೇಳಿದ.

"ಹತ್ತು ಸಾವಿರ ಕಳೆದುಕೊಂಡೆ. ಸಿಕ್ಕಿತೇನೋ ಎಂದು ಹುಡುಕುತ್ತಿದ್ದೇನೆ.'

"ಹೋಗಿ ನದಿಯ ಬ್ರಿಡ್ಜಿನಿಂದ ಧುಮುಕು. ನದಿಯ ತಳದಲ್ಲಿ ಸಿಕ್ಕ ಬಹುದು."

"ಇದು ಜೋಕ್ ಅಲ್ಲ."

"ಇದು ಬಿಗ್ಗೆಸ್ಟ್ ಜೋಕ್, ಲೋ ಬಕರಾ, ಈ ಊರಿನಲ್ಲಿ ಸ್ಟುಡಿಯೊ' ಇಲ್ಲ, ಪ್ರೊಡ್ಯೂಸರ್ಸ್ ಇಲ್ಲ, ಅವರು ಯಾರೋ ಹೇಳಿದರು. ನೀನು, ಆ ಮುದುಕ ನಂಬಿದಿರಿ."

"ಏನು ಮಾಡುತ್ತೀ ಹೇಳು. ಅವಳು ಆ ಹ್ಯಾಂಲೆಟ್'ಹಿಂದೆ ತಿರುಗುತ್ತಿದ್ದರೆ ಕೈಕಟ್ಟಿ ಕೂತುಕೋ ಅಂತಾ ಹೇಳ್ತೀಯಾ?"

"ಹೊಟ್ಟೆ ಕಿಚ್ಚು ಕೆಟ್ಟದು ಮಗೂ, ಹತ್ತು ಸಾವಿರ ಕೊಟ್ಟರೆ ಲವ್ ಮಾಡ್ತಾಳೋ ನಿನ್ನ? ಲವ್ ಅಂದ್ರೆ ಬಂಡವಾಳ ಹಾಕಿ ಆರಂಭ ಮಾಡೋ

ಇಂದಷ್ಟಿನೇ ? ಅಲ್ಲದೇ ನಿನ್ನ ಮೇಲೆ ಲವ್ ಇಲ್ಲದವಳನ್ನು ಆಣೆ, ಪ್ರಮಾಣ, ಹಣ ಹೂಡಿಕೆಯಿಂದ ಗೆಲ್ಲಬೇಕಾದ ಅಗತ್ಯ ಏನು ? ''

" ಆದರೆ........''

" ಆದರೆ ಅವಳ ಮಾನ, ಪ್ರಾಣ ಎಲ್ಲಾ ಹೋಗ್ತಿತ್ತಲ್ಲಾ. ಅವಳ್ನ ಖತಂ ಮಾಡಿ ಯಾರ್ನ ಲವ್ ಮಾಡ್ತೀ ಮಗನೇ ? ''

" ನಿನ್ನೆ ರಾತ್ರಿ ಏನಾಯ್ತು ರಾಜೀವ್ ? ''

" ಏನು ಆಗ್ತದೆ ? ಕಾರು ಹತ್ತಿಕೊಂಡು ನಾನು ಪ್ರಿನ್ಸಿಪಾಲರು ಅಲ್ಲಿ ಇಲ್ಲಿ ತಿರುಗ್ಯಾಡ್ತಾ ಊರ ಹೊರಗೆ ಹೋದೆವು, ಅಷ್ಟರಲ್ಲಿ ಮೋಟಾರ್ ಬೈಕ್ ಸದ್ದು ಕೇಳಿತು. ಕಾರನ್ನು ನೆರಳಿನಲ್ಲಿ ನಿಲ್ಲಿಸಿ, ಹೆಡ್ ಲೈಟ್ ಆಫ್ ಮಾಡಿದೆ. ಬೈಕ್ ಮುಂದೆ ಹೋದಂತೆ ಅದನ್ನು ಫಾಲೋ ಮಾಡಿದೆ. ಅದು ನಿಂತಿತು. ನಾನೂ ಕಾರು ನಿಲ್ಲಿಸಿ, ಇಳಿದು ಹೋದೆ. ಒಂದು ಕೋಣೆ ಬಾಗಿಲಲ್ಲಿ ಒಂದು ದೇಹ ಬಿದ್ದಿತ್ತು. ಲೈಟ್ ಇರಲಿಲ್ಲ. ಕೋಣೆಯಲ್ಲಿ ಮೂವರು ಹೊಡೆದಾಡುತ್ತಿದ್ದರು. ಮಾರಾಮಾರಿ ಗದ್ದಲದಲ್ಲಿ ಮಂದಾರ ಕಿರುಚಿದ ಸದ್ದು ಕೇಳಿ, ಅವಳನ್ನು ಹೊರಗೆಳೆದು ಕೊಂಡು ಬಂದರೆ 'ಶಿವು ಎಲ್ಲಿ' ಎಂದಳಲಾರಂಭಿಸಿದಳು. ನಾನೂ ಅವಳೂ ಅವನನ್ನೆತ್ತಿಕೊಂಡು, ಕಾರಿನೊಳಗೆ ತುರುಕಿ, ಸೀದಾ ನಮ್ಮ ಹಾಸ್ಟೆಲಿಗೆ ಒಯ್ದೆವು. ಅವಳನ್ನು ಅವಳ ಹಾಸ್ಟೆಲಿಗೊಯ್ದು ಬಿಟ್ಟೆ. ಮತ್ತೆ ಇದೆಲ್ಲಾ ಆಗಿಲ್ಲವೋ ಏನೋ ಎಂದೇ ವರ್ತಿಸುತ್ತಿದ್ದೇನೆ ಇದುವರೆಗೂ.''

" ನಿಮಗೆ ಒದೆಗಳು ಬೀಳಲಿಲ್ಲವೇ ? ''

'' ಇಲ್ಲ, ಒಂದು ಕಲ್ಲು ಹಾರಿ ಬಂತು. ಕಾರಿನ ಹತ್ತಿರವೂ ಸುಳಿಯಲಿಲ್ಲ. ನಾನಿನ್ನು ಬರುತ್ತೇನೆ. ಇನ್ನಾದರೂ ಎಚ್ಚರವಾಗಿರು. ಕಿಂಗ್ ಲಿಯರ್ ಎಲ್ಲಿ ? "

" ಯಾವ ಕಿಂಗ್ ಲಿಯರ್ ? "

" ಷೇಕ್ಸ್ ಪಿಯರ್ ಸೃಷ್ಟಿಸಿದ ಹೀರೋ ! "

o o o o o

ರಾಜೀವ ಬಂದಾಗ ಹ್ಯಾಂಲೆಟ್ ತನ್ನ ಜಾಗದಲ್ಲಿ ಕಾಣಿಸಲಿಲ್ಲ. ಹೋಟೆಲ ಹೊರಗಡೆ ಹೋಗಿ ನೋಡಿದ.

ಹ್ಯಾಂಲೆಟ್ ಪಕ್ಕದ ಅಂಗಡಿಯಿಂದ ನಗು ನಗುತ್ತಾ ಬಂದ, ಆದರೆ ಅವನ ಕಣ್ಣಂಚಿನಲ್ಲಿ ಎರಡೆರಡು ಹನಿಗಳು. ಅವನ ಕೈಯಲ್ಲಿ ಎರಡು ಮಲ್ಲಿಗೆಯ ದಂಡೆಗಳು..

" ಏಕಿದು ? "

" ನನ್ನ ಕನಸಿನ ರಾಣಿಗೆ ಕನಸಿನಲ್ಲಿ ಮುಡಿಸಲು. "

" ಮಂದಾರ ? "

" ಅದು ಒಣ ಸಂಪಿಗೆ ! "

[ಮುಗಿಯಿತು]

ಯಾತ್ರಿಕರ ಪತ್ರ

—ಕೇಫ

ಉಗ್ಗರ್ಸೆಯಲ್ಲಿ ನಾವು ಹಿಂದಿನ ರಾತ್ರಿ ತಿಂದ ಹಲಸಿನ ಹಣ್ಣು ಮತ್ತು ಬೆಳಿಗ್ಗೆ ಕುಡಿದ ಪ್ಯೂರ್ ಹಾಲು ನಮ್ಮನ್ನು ಮಧ್ಯಾಹ್ನದವರಿವಿಗೂ ತಣಿಸಿತ್ತು.

"ನಿಮಗಿಬ್ಬರಿಗೂ ಹೊಟ್ಟೆ ಯೊಚ್ನೇನೇ ಇಲ್ವೇನ್ರಯ್ಯ?" ಅಂತ ಚಂದಿ ಕೇಳಿದ.

ಕಂಚಿನಾಳಾ ಊರಿಗೆ ಬಂದಿದ್ವು.

"ಈ ಊರಿಗೆ ಈ ಹೆಸರು ಹೇಗೆ ಬಂತೂಂತ ತಿಳ್ಕೊಬೇಕ್ರಯ್ಯ"

"ಆಗಲಿ, ನೀನು ಕಂಚಿನಾಳದ ಬಗ್ಗೆ ರಿಸರ್ಚ್‌ನಡ್ಸು. ನಾನೂ ಚಂದೀ ಖಾನಾವಳೀ ಇದ್ರೆ ನುಗ್ತೀವೆ" ಅಂದ ರಾಜ.

ರಾಜ ಚಂದಿ ಹೊರಟೇಬಿಟ್ರು. ಆ ಮುಹೂರ್ತಕ್ಕೇ ಕಾದಿದ್ದ ಹಾಗೆ ಎಲ್ಲೋ ದೇವಸ್ಥಾನದ ಘಂಟೆ ಬಾರಿಸಿದ ಶಬ್ದ ಕೇಳಿಸಿತು. ಶಬ್ದವೇದಿ ಅರ್ಜುನನ ಹಾಗೆ ನಾನು ಆಕಡೆ ನಡೆದೆ.

ತ್ರಿಲೋಕೇಶ್ವರನ ದೇವಸ್ಥಾನ. ತುಂಬಾ ಪುರಾತನಕಾಲದ್ದು ಅಂತ ಅರ್ಚಕ ಅನಂತ ಭಟ್ಟರು ಹೇಳಿದರು. ಅವರ ಮಾವ ನಾಗರಿ ಭಟ್ಟರು ಅವರ ಒಬ್ಬಳೇ ಮಗಳನ್ನು ಇವರಿಗೆ ಕೊಟ್ಟು ಲಗ್ನಮಾಡಿ ಅರ್ಚಕ ಕಸುಬನ್ನು ವರದಕ್ಷಿಣೆಯಾಗಿ ಬಿಟ್ಟು ಹೋಗಿದ್ದರು, ದೇವಸ್ಥಾನ ಅಷ್ಟೇನೂ ದೊಡ್ಡದಲ್ಲ, ಯಾವ ಮಹಾ

ರಾಜ ಯುವರಾಜರೂ ಕಟ್ಟಿಸಿದ್ದಲ್ಲ—ಪ್ರಾಯಶಃ ಎರಡು ಮೂರು ತಲೆಮಾರಿನ ಕೆಳಗೆ ಊರಿನವರೇ ಕಟ್ಟಿಸಿರಬೇಕು.

ಅನಂತ ಭಟ್ಟರು ಮಂಗಳಾರ್ತಿ ಕೊಡುತ್ತಾ—"ಪ್ರಸಾದ ಸ್ವೀಕರಿಸ ಬೇಕು" ಅಂದರು

ನನಗೆ "ಪ್ರಸಾದ"ದ ಕಲ್ಪನೆ ನಿಜಕ್ಕೂ ಇರಲಿಲ್ಲ. ಒಂದು ದೊಡ್ಡ ಮುತ್ತುಗದ ಎಲೆಯಲ್ಲಿ ಒಂದು ಮುದ್ದೆ ಬಿಸಿಬಿಸಿ ಪೊಂಗಲ್‌ನ ಗರ್ಭಗುಡಿಯಿಂದ ಹೊರತಂದರು.

"ಕ್ಷಮಿಸಿ, ನನ್ನ ಜೊತೆ ಇಬ್ಬರು ಸ್ನೇಹಿತರಿದಾರೆ—ಅವರೂ ಮಂಗಳಾರ್ತಿ ಮಾಡಿಸುತ್ತಾರೆ" ಅನ್ನುತ್ತಾ ಹೊರಗೆ ಓಡಿ ಒಂದು ಕಾಕಾ ಚಾ ಅಂಗಡೀ ಮುಂದೆ ನನಗಾಗಿ ಕಾದಿದ್ದ ರಾಜ—ಚಂದಿ ಇಬ್ರನ್ನೂ ಅಟ್ಟಿಕೊಂಡು ಪುನಃ ದೇವಸ್ಥಾನಕ್ಕೆ ಬಂದೆ.

ಅನಂತ ಭಟ್ಟರು ಮಂಗಳಾರ್ತಿ ಮಾಡಿದರು. ಮಂಗಳಾರ್ತಿ ತಟ್ಟೆಗೆ ಒಂದು ರೂಪಾಯಿ ಹಾಕಿದೆ. ರಾಜ—ಒಂದು ರೀತಿ ಶ್ವಾಸಬಿಟ್ಟ ನಾನು ಸುಮ್ಮನಿದ್ದೆ. ಅನಂತ ಭಟ್ಟರು ಮೂವರಿಗೂ ಒಂದೊಂದು ಮುದ್ದೆ ಪ್ರಸಾದ ಕೊಟ್ಟರು. ರಾಜ—ಚಂದಿ-ನನ್ನ ಕಡೆ ಅರ್ಥಪೂರ್ಣವಾಗಿ ನೋಡಿದರು.

ಕಂಚಿನಾಳಾಕ್ಕೆ ಆ ಹೆಸರು ಬಂದಿದ್ದು ಒಂದು ವಿಚಿತ್ರ ರೀತಿಯಲ್ಲಿ. ಅನಂತ ಭಟ್ಟರು ತಾವು ಕೇಳಿತಿಳಿದು ಕೊಂಡಿದ್ದ ಪ್ರಕಾರ—ಹಿಂದೆ ಆ ಊರಿನಲ್ಲಿ ಕೆಂಚ-ಕೆಂಚಿ ಅಂತ ಒಂದು ಕಮ್ಮಾರ ಗಂಡ-ಹೆಂಡ್ತಿ ಇದ್ರಂತೆ, ಕೆಂಚ—ಕಾಡಿಗೆ ಹೋಗಿ ಸೌದೆ ಕಡಿದು ಮಾರಿ ಜೀವನ ನಡೆಸ್ತಿದ್ದನಂತೆ. ಒಂದು ದಿನ ಕಾಡಿಗೆ ಹೋದ ಕೆಂಚ ವಾಪಸುಬರ್ಲೇಇಲ್ಲ. ಮೂರು ದಿನಗಳಾದ ಮೇಲೆ ಹತ್ತು ಮೈಲಿ ದೂರದಲ್ಲಿ

ಮತ್ತೊಂದು ಹಳ್ಳಿಯಲ್ಲಿ ರಾತ್ರಿ ಹುಲಿ ನುಗ್ಗಿ ಒಂದು ಮಗೂನ ಎತ್ತಿಕೊಂಡು ಹೋದಾಗ—ಎಲ್ರಿಗೂ ಗುಮಾನಿ ಬಂತಂತೆ—ಕೆಂಚನೂ ಆ ಹುಲಿಗೇ ಆಹುತಿ ಆಗಿ ಬಿಟ್ಕೊಂತ. ಈ ಸುದ್ದಿ ತಿಳಿಯುತ್ಲೂ ಕೆಂಚಿ—ಆ ಊರಿನಲ್ಲಿ ಹರೀತಿದ್ದ ಒಂದು ಹಳ್ಳದಲ್ಲಿದ್ದ ಮಡುವಿನಲ್ಲಿ ಹಾರಿ ಬಿಟ್ಟಳಂತೆ. ಆಶ್ಚರ್ಯದ ಸಂಗತಿ ಎಂದರೆ—ಕೆಂಚಿಯ ಶವಸಿಗಲೂ ಇಲ್ಲ. ಒಂದು ತಿಂಗಳೊಳಗಾಗಿ ಆ ಹಳ್ಳವೂ ಬತ್ತಿಹೋಯ್ತು ಊರಿಗೆ ಕೆಂಚೀಹಳ್ಳ—ಹೆಸರಾಯ್ತು.

ಹೈದರಾಲೀಕಾಲ್ದಲ್ಲಿ ಮೂರು ನಾಲ್ಕು ಸಂಸಾರಗಳು ಆ ಊರಿನಲ್ಲಿ ನೆಲೆಸಿದರು. ಅವರು ತಮಗಾಗಿ ಒಂದು ದರ್ಗ ಕಟ್ಟಿಕೊಂಡ್ರು—ಈ ತ್ರಿಲೋಕೇಶ್ವರನಿಗೂ ಸಲಾಂಮಾಡ್ತಿದ್ದರಂತೆ. ದಸ್ತಗೀರ್ ಎಂಬಾತ ತಾನು ಸಾಯುವಾಗ ತನ್ನ ಎರಡು ಸೇರು ಅಕ್ಕಿ ಅನ್ನ ನೇವೇದ್ಯ ಮಾಡ್ಬೇಕು ಅಂತ ಉಯಿಲು ಬರೆಸಿದನಂತೆ, ಆ ಉಯಿಲು ಬರೆದವ ಪ್ರಾಯಶಃ ಕಂಚಿನಾಳಾ–ಬರೆದಿರಬೇಕು ಅದೇ ಹೆಸರು ಖಾಯಂ ಆಯ್ತು,

ಅನಂತ ಭಟ್ಟರು ಕೊಟ್ಟ ಪ್ರಸಾದವನ್ನು ತಿಂದು ನೀರು ಕುಡಿದು ನಮ್ಮ ದಾರಿ ಹಿಡಿದೆವು. ನಾನು ನಿಜವಾಗಿ ತ್ರಿಲೋಕೇಶ್ವರನ ಮೇಲಿನ ಭಕ್ತಿಯಿಂದ ಮಂಗಳಾರ್ತಿ ತಟ್ಟೆಗೆ ದುಡ್ಡು ಹಾಕಿದೆ–ಪ್ರಸಾದಕ್ಕಲ್ಲ ಅಂತ ಎಷ್ಟು ಹೇಳಿದರೂ–ರಾಜ ಚಂದಿ ನಂಬಲಿಲ್ಲ. ಕೇವಲ ಒಂದು ರೂಪಾಯಿ ಖರ್ಚಿನಲ್ಲಿ ಮೂರು ಜನಕ್ಕೂ ಊಟ ಸಿಕ್ಕಿತಲ್ಲ ಅಂತ ಒಂದು ಥ್ಯಾಂಕ್ಸೂ ನನಗೆ ಕೊಡಲಿಲ್ಲ.

ನಂ ಕ್ಲಬ್ಬಿನಲ್ಲಿ........

—ಆನಂದ್

ಸೂರ್ಯ ಮುಳುಗಿ, ತಂಪೇರುವ ಸಮಯ. ಒಣಗಿದ ಗಂಟಲುಗಳಿಗೆ ತೀರ್ಥ ಸ್ಪರ್ಶವಾಗುವ ಸುಮುಹೂರ್ತ. ರಾಜು ಇದ್ದಕ್ಕಿದ್ದಂತೆ, "ಅನ್ಯಾಯ, ಬಲು ಅನ್ಯಾಯ!" ಅಂದ. ಕೂಡಲೇ ಬಾರಿನ ನಾಲ್ಕು ಮೂಲೆಗಳಿಂದ ಪ್ರತಿಕ್ರಿಯೆ : "ಇಂದಿರಾ ಹತ್ಯೆ!" —ಈಶಾನ್ಯ. "ರಾಜೀವ್ ಆಯ್ಕೆ" —ನೈರುತ್ಯ. "ದೆಹಲಿ ಗಲಭೆ!" —ವಾಯುವ್ಯ. ನಾನು ಆತುರಪಡದೆ. "ಏನೋ ರಾಜು ಅದು, ಅಂಥಾ ಅನ್ಯಾಯ?" ಅಂದೆ. ಅವನು ಮುಖ ಕೆಳಗೆ ಮಾಡಿ, "ಈ ಮದ್ದೂರು ವಡೆ ಬಲು ಗಟ್ಟಿ!" ಅನ್ನೋದೇ! ರಾಜು ಬಲು ಅಮಾಯಕ, ಪ್ರಪಂಚದ ವಿಷಯವೇ ತಿಳಿಯದು.

o o o o o o

"ಸುದ್ದಿ ಕೇಳಿದೆಯೇನೋ? ಭೂಪಾಲ್‌ನಲ್ಲಿ ಕಾರ್ಖಾನೆಯಿಂದ ಅನಿಲ ಲೀಕ್ ಆಗಿ ನೂರಾರು ಜನ ಸತ್ತರಂತೆ, ಪಾಪ!

"ಹಾಗಾದರೆ ಅದನ್ನು ಕಾರ್ಖಾನೆ ಅಂತ ಯಾಕೆ ಕರೀಬಾರದು?"


"ನಿನ್ನ ಹಾಸ್ಯಕ್ಕೆ ಬೆಂಕಿ ಹಾಕ!"

"ಇಲ್ಲ ಕಣೋ. ಹಲವು ನೂತನ ಕಾಯಿಲೆಗಳ ಬಗ್ಗೆ ಯೋಚಿಸ್ತಿದ್ದೆ! ಮನಸ್ಸು ಹಾಗೇ ಓಡ್ತು!"

"ಯಾವುದೋ ನೂತನ ಕಾಯಿಲೆಗಳು?"

"ಕೇಳು : ಸ್ವಾರ್ಥನಿಯಂ— ರಾಜಕಾರಣಿಗಳ ಅಂಟು ರೋಗ; ವಧುಮೋಹ ಕಾಲೇಜಿನ ರೋಮಿಯೋಗಳ ಜಾಡ್ಯ ; ಸರಗತ್ತು— ಸರಗಳ್ಳನ. ಭಯದಿಂದಾಗುವ ಕತ್ತು ನೋವು! ಇನ್ನೂ ಏನೇನಿದೆಯೋ?"

o o o o o o



No. 23 AL 4-NT III

—: ಶುಭಾಶಯಗಳೊಂದಿಗೆ :—



ದಿ ಸಂಡೂರ್ ಮ್ಯಾಂಗನೀಸ್ ಅಂಡ್ ಐರನ್‌ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಛೇರಿ :

“ಲೋಹಾದ್ರಿ ಭವನ”

ಯಶವಂತ ನಗರ್–583124 ಸಂಡೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ